**2012ರ ಕರ್ನಾಟಕ ಅಧಿನಿಯಮ ಸಂಖ್ಯೆ 8**

**ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ, 2011**

**ಪ್ರಕರಣಗಳ ಪಟ್ಟಿ**


**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಕಲ್ಲುಪುಡಿ ಮಾಡುವ ಘಟಕಗಳನ್ನು ನಡೆಸುವವರು ಲೈಸೆನ್ಸನ್ನು ಪಡೆಯುವುದು
4. ಲೈಸೆನ್ಸಿಗೆ ಅರ್ಜಿ

4ಎ.. **ಕಲ್ಲುಪುಡಿ ಮಾಡುವ ಘಟಕದ (ಕ್ರಷರ್) ಲೈಸೆನ್ಸ್ ವರ್ಗಾವಣೆ**

4ಬಿ. **ಲೈಸೆನ್ಸುದಾರ ಮೃತನಾದಾಗ ಕಲ್ಲುಪುಡಿ ಮಾಡುವ ಘಟಕದ (ಕ್ರಷರ್) ಲೈಸೆನ್ಸಿನ ಸ್ಥಿತಿಗತಿ**

5. ಲೈಸೆನ್ಸಿನ ಕಾಲಾವಧಿ
6. ಸುರಕ್ಷಿತ ವಲಯವೆಂದು ಘೋಷಿಸುವುದಕ್ಕೆ ಷರತ್ತುಗಳು

6ಎ. ಲೈಸೆನ್ಸನ್ನು ನೀಡುವುದಕ್ಕಾಗಿ ಷರತ್ತುಗಳು

7. ಸರ್ಕಾರಿ ಯೋಜನೆಗಳಿಗಾಗಿ ಕಲ್ಲುಪುಡಿ ಮಾಡುವ ಘಟಕಗಳಿಗೆ ಲೈಸೆನ್ಸ್
8. ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸ್ ನೀಡಿಕೆ ಮತ್ತು ನಿಯಂತ್ರಣ ಪ್ರಾಧಿಕಾರದ ಸ್ಥಾಪನೆ
9. ಪ್ರಾಧಿಕಾರದ ಕರ್ತವ್ಯಗಳು
10. ಲೈಸೆನ್ಸಿನ ರದ್ಧತಿ
11. ನಿರ್ದೇಶನಗಳನ್ನು ನೀಡಲು ಅಧಿಕಾರ
12. ಬಾಧಿತರಿಗೆ ನೀಡಲಾಗುವ ಪರಿಹಾರ ನಿಧಿ
13. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ
14. ವಾರ್ಷಿಕ ವರದಿ
15. ಲೈಸೆನ್ಸಿಂಗ್ ಪ್ರಾಧಿಕಾರದ ಆದೇಶಗಳ ವಿರುದ್ಧ ಅಪೀಲುಗಳು
16. ದಂಡಗಳು
17. ಅಪರಾಧಗಳ ಸಂಜ್ಞೇಯತೆ

17ಎ. **ಅಪರಾಧಗಳ ರಾಜಿ**

18. ನಿಯಮಗಳ ರಚನಾಧಿಕಾರ
19. ತೊಂದರೆಗಳ ನಿವಾರಣೆ
20. ನಿರಸನ ಮತ್ತು ಉಳಿಸುವಿಕೆಗಳು

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2012ರ ಅಧಿನಿಯಮ ಸಂಖ್ಯೆ 8.–** ಮಾನ್ಯ ಉಚ್ಚ ನ್ಯಾಯಾಲಯವು, ರಿಟ್ ಅರ್ಜಿ ಸಂಖ್ಯೆ. 17078 / 1997ರಲ್ಲಿ ದಿನಾಂಕ: 10.7.1998ರ ತನ್ನ ಆದೇಶದ ಮೂಲಕ, ಕಲ್ಲುಪುಡಿ ಮಾಡುವ ವ್ಯವಹಾರ ನಡೆಸುವುದನ್ನು ವಿನಿಯಮನಗೊಳಿಸುವ ಕಾರ್ಯನೀತಿಯನ್ನು, ಮಾರ್ಗದರ್ಶಿ ಸೂತ್ರಗಳು, ಲೈಸೆನ್ಸುಗಳು ಹಾಗೂ ಅವುಗಳ ನಿಯತಕಾಲಿಕ ನವೀಕರಣವು ಒಳಗೊಂಡಂತೆ, ಸೂಕ್ತ ಷರತ್ತುಗಳನ್ನು ನಿಯಮಿಸುವ ಮೂಲಕ, ರೂಪಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

(1) ಕಲ್ಲುಪುಡಿ ಮಾಡುವ ಘಟಕಗಳಿಗೆ ಲೈಸೆನ್ಸನ್ನು ನೀಡುವುದು;

(2) ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ವಿನಿಯಮನ ಸಮಿತಿಯ ಸ್ಥಾಪನೆ;

(3) ಕಲ್ಲುಪುಡಿ ಮಾಡುವ ಘಟಕಗಳ ಪರಿಶೀಲನೆ;

(4) ಬಾಧಿತರ ಪರಿಹಾರ ನಿಧಿ;

(5) ಲೈಸೆನ್ಸನ್ನು ನೀಡುವ ಪ್ರಾಧಿಕಾರದ ಆದೇಶಗಳ ವಿರುದ್ಧ ಅಪೀಲುಗಳು;

(6) ದಂಡಗಳು

– ಮತ್ತು ಕೆಲವು ಇತರೆ ಆನುಷಂಗಿಕ ವಿಷಯಗಳಿಗೆ, ಉಪಬಂಧ ಕಲ್ಪಿಸಲು ಶಾಸನವನ್ನು ಅಧಿನಿಯಮಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧ್ಯಾದೇಶ, 2011ನ್ನು (2011ರ ಕರ್ನಾಟಕ ಅಧ್ಯಾದೇಶ ಸಂಖ್ಯೆ:2) ದಿನಾಂಕ:7.9.2011ರಂದು ಪ್ರಖ್ಯಾಪಿಸಲಾಯಿತು.

ಸದರಿ ಅಧ್ಯಾದೇಶದ ಬದಲಾಗಿ ಈ ವಿಧೇಯಕ.

ಆದ್ದರಿಂದ ಈ ವಿಧೇಯಕ.

(2011ರ ವಿಧಾನಸಭೆಯ ವಿಧೇಯಕ ಸಂಖ್ಯೆ:38, ಕಡತ ಸಂಖ್ಯೆ:ಸಂವ್ಯಶಾಇ 20 ಶಾಸನ 2011)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 23 ಮತ್ತು 24ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

## II

**2013ರ ಅಧಿನಿಯಮ ಸಂಖ್ಯೆ 64.–** ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ಅಧಿನಿಯಮ, 2011ನ್ನು (2012ರ ಕರ್ನಾಟಕ ಅಧಿನಿಯಮ ಸಂಖ್ಯೆ.8) ಈ ಮುಂದಿನ ಕಾರಣಗಳಿಗಾಗಿ ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ, ಎಂದರೆ:–

1. ಅಧಿನಿಯಮದಲ್ಲಿ ವಿಧಿಸಲಾದ ಷರತ್ತುಗಳನ್ನು ವಿವಿಧ ಆಡಳಿತಾತ್ಮಕ ಕಾರಣಗಳಿಂದಾಗಿ ಕಟ್ಟುನಿಟ್ಟಾಗಿ ಪಾಲಿಸುವಲ್ಲಿ ಲೈಸೆನ್ಸಿಂಗ್ ಪ್ರಾಧಿಕಾರವು ಸುರಕ್ಷಿತ ವಲಯವನ್ನು ಘೋಷಿಸುವುದು ಕಷ್ಟವಾಗಿತ್ತು;
2. ಅಧಿನಿಯಮವು ಸುರಕ್ಷಿತ ವಲಯವನ್ನು ಗುರುತಿಸುವ, ಭೂಮಿಯನ್ನು ಖರೀದಿಸುವ ಮತ್ತು ಅದನ್ನು ಲೈಸೆನ್ಸಿಂಗ್ ಪ್ರಾಧಿಕಾರವು ಕಲ್ಲುಪುಡಿ ಮಾಡುವ ಘಟಕಗಳನ್ನು (ಕ್ರಷರ್‌ಗಳ)ಸ್ಥಾಪಿಸಲು ಅಭಿವೃದ್ಧಿಪಡಿಸುವ ಬಗ್ಗೆ ಉದ್ದೇಶಿಸಿದ್ದು, ಇದು ಸುರಕ್ಷಿತ ವಲಯವನ್ನು ಘೋಷಿಸುವಲ್ಲಿ ವಿಳಂಬವಾಗುವುದಕ್ಕೆ ಕಾರಣವಾಗಿರುತ್ತದೆ.

3. ಸುರಕ್ಷಿತ ವಲಯಗಳನ್ನು ಸಕಾಲದಲ್ಲಿ ಅಭಿವೃದ್ಧಿಪಡಿಸಲು ಸಾಧ್ಯವಾಗದಿರುವುದರಿಂದ, ಅಭಿವೃದ್ಧಿ ಹೊಂದಿದ ಸುರಕ್ಷಿತ ವಲಯಗಳಿಗೆ ಈಗಿರುವ ಕಲ್ಲುಪುಡಿ ಮಾಡುವ ಘಟಕಗಳನ್ನು (ಕ್ರಷರ್‌ಗಳು) ಸ್ಥಳಾಂತರಿಸುವುದಕ್ಕೆ ತಡೆಯೊಡ್ಡಿದೆ. ಅದೇ ರೀತಿಯ ಆಡಳಿತಾತ್ಮಕ ಸಮಸ್ಯೆಯ ಕಾರಣದಿಂದ ಹೊಸ ಕಲ್ಲುಪುಡಿ ಮಾಡುವ ಘಟಕಗಳಿಗೆ (ಕ್ರಷರ್) ಲೈಸೆನ್ಸುಗಳನ್ನು ನೀಡಲು ಸಾಧ್ಯವಾಗುವುದಿಲ್ಲ.

4. ಮೇಲಿನ ಕಾರಣಗಳೇ ಮತ್ತೆ ಘನತೆವೆತ್ತ ಉಚ್ಚ ನ್ಯಾಯಾಲಯವು, ರಿಟ್ ಅರ್ಜಿ ಸಂಖ್ಯೆ.40894-956/2012, ದಿನಾಂಕ: 27.03.2013ರಲ್ಲಿ ಆದೇಶ ಹೊರಡಿಸುವುದಕ್ಕೆ ಕಾರಣವಾಗಿದ್ದು, ಇದರಿಂದಾಗಿ ಹೆಚ್ಚಿನ ಸಂಖ್ಯೆಯ ಕಲ್ಲುಪುಡಿ ಮಾಡುವ ಘಟಕಗಳನ್ನು ಸ್ಥಗಿತಗೊಳಿಸುವಂತಾಗಿದ್ದು, ಇದರಿಂದಾಗಿ ರಾಜ್ಯದಲ್ಲಿನ ಅಭಿವೃದ್ಧಿ ಪರ ಯೋಜನೆಗಳು ಹಾಗೂ ನಿರ್ಮಾಣ ಚಟುವಟಿಕೆಗಳಿಗೆ ಜಲ್ಲಿಕಲ್ಲಿನ ಪೂರೈಕೆಯಲ್ಲಿ ಅಭಾವ ಕಂಡುಬರುತ್ತಿದೆ.

5. ಜೆಲ್ಲಿ ಕಲ್ಲುಗಳನ್ನು ಸರಬರಾಜು ಮಾಡದೇ ಇರುವುದು ಮೂಲಭೂತ ಸೌಕರ್ಯ ಯೋಜನೆಗಳು ಮತ್ತು ಕೈಗಾರಿಕಾ ಅಭಿವೃದ್ಧಿಗಳನ್ನು ಸ್ಥಗಿತಗೊಳ್ಳುವಂತೆ ಮಾಡಿದೆ.

ಈಗ ಅಧಿನಿಯಮವು ಈ ಮುಂದಿನ ಉಪಬಂಧಗಳನ್ನು ಕಲ್ಪಿಸುತ್ತದೆ:-

(1) ವೈಜ್ಞಾನಿಕ ಅಧ್ಯಯನಗಳು ಮತ್ತು ಪದ್ಧತಿಗಳ ಆಧಾರದ ಮೇಲೆ, ಪ್ರದೇಶಗಳನ್ನು ಸುರಕ್ಷಿತ ವಲಯವೆಂದು ಘೋಷಿಸುವುದಕ್ಕಾಗಿ ಷರತ್ತುಗಳನ್ನು ನಿಯಮಿಸುವುದು;

(2) ಈ ಪ್ರಸ್ತಾವಿತ ಅಧಿನಿಯಮ/ನಿಯಮಗಳಲ್ಲಿ ಗೊತ್ತುಪಡಿಸಲಾದ ಷರತ್ತುಗಳನ್ನು ಅಸ್ತಿತ್ವದಲ್ಲಿರುವ ಕಲ್ಲುಪುಡಿ ಮಾಡುವ ಘಟಕಗಳು ಪೂರೈಸಿದರೆ, ಅವುಗಳನ್ನು ಸುರಕ್ಷಿತ ವಲಯವೆಂದು ಘೋಷಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು;

(3) ಭೂಮಿಯನ್ನು ಗುರುತಿಸುವ ಮತ್ತು ಖರೀದಿಸುವ ಹೊಣೆಯು ಅರ್ಜಿದಾರನದಾಗಿರುವುದು;

(4) "ಸುರಕ್ಷಿತ ವಲಯವೆಂದು" ಘೋಷಿಸುವುದಕ್ಕೆ ಆಧಾರವಾಗಿ, ದೂರವೊಂದನ್ನು ಮಾತ್ರ ನಿಯಮಿಸುವುದಕ್ಕೆ ಬದಲಾಗಿ, ಪರಿಸರವನ್ನು ರಕ್ಷಿಸಲು ಸುರಕ್ಷಿತ ಕ್ರಮಗಳನ್ನು ಕಡ್ಡಾಯಗೊಳಿಸುವ ಮೂಲಕ ಕಲ್ಲುಪುಡಿ ಮಾಡುವ ಘಟಕಗಳಿಂದ ಉಂಟಾಗುವ ಪರಿಸರ ಮಾಲಿನ್ಯವನ್ನು ತಡೆಗಟ್ಟುವುದಕ್ಕೆ ಆದ್ಯತೆ ನೀಡಲಾಗಿದೆ;

(5) ಲೈಸನ್ಸನ್ನು ನೀಡುವುದಕ್ಕೆ ಮೊದಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ;

(6) ವಿಳಂಬ ಮಾಡದೆ ಲೈಸನ್ಸನ್ನು ನೀಡಲು ಮತ್ತು ಕಲ್ಲುಪುಡಿ ಮಾಡುವ ವ್ಯವಹಾರವನ್ನು ನಿಯಂತ್ರಿಸಲು ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳಿಗಾಗಿ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರವನ್ನು ಸ್ಥಾಪಿಸುವುದು.

ಆದ್ದರಿಂದ ಈ ವಿಧೇಯಕ.

(2013ರ ವಿಧಾನಸಭೆಯ ವಿಧೇಯಕ ಸಂಖ್ಯೆ:24, ಕಡತ ಸಂಖ್ಯೆ:ಸಂವ್ಯಶಾಇ 56 ಶಾಸನ 2013)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 23 ಮತ್ತು 24ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

**III**

**2020ರ ಅಧಿನಿಯಮ ಸಂಖ್ಯೆ 28.-** ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ಅಧಿನಿಯಮ, 2011ನ್ನು (2012ರ ಕರ್ನಾಟಕ ಅಧಿನಿಯಮ ಸಂಖ್ಯೆ 8) ಈ ಮುಂದಿನ ಕಾರಣಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ:-

(i) ಇತರ ರಸ್ತೆಯನ್ನು ಪರಿಭಾಷಿಸದಿರುವ ಕಾರಣದಿಂದಾಗಿ ಅರ್ಜಿದಾರನು ಎದುರಿಸುತ್ತಿರುವ ತೊಂದರೆಯನ್ನು ಕಡಿಮೆ ಮಾಡಲು ಹಾಗೂ ಸ್ಪಷ್ಟತೆಯನ್ನು ಒದಗಿಸಲು;

(ii) ಲೈಸೆನ್ಸಿಂಗ್ ಪ್ರಾಧಿಕಾರದ ಅನುಮೋದನೆಯೊಡನೆ ಲೈಸೆನ್ಸು ಹೊಂದಿರುವವನಿಗೆ, ವ್ಯವಹಾರದಲ್ಲಿ ಹೂಡಿಕೆಯನ್ನು ಮಾಡುವ ಬೇರೊಬ್ಬರಿಗೆ ಲೈಸೆನ್ಸನ್ನು ವರ್ಗಾಯಿಸುವುದಕ್ಕೆ ಆಯ್ಕೆಯನ್ನು ನೀಡಲು;

(iii) ವಾರ್ಷಿಕ ನಿಯಂತ್ರಣಾ ಶುಲ್ಕವನ್ನು ಪಾವತಿಸುವುದಕ್ಕೆ ಒಳಪಟ್ಟು ಅಸ್ತಿತ್ವದಲ್ಲಿರುವ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ಲೈಸನ್ಸ್‌ನ ಮಂಜೂರಾತಿಯ ದಿನಾಂಕದಿಂದ ಇಪ್ಪತ್ತು ವರ್ಷಗಳವರೆಗಿನ ಭಾವಿತ ವಿಸ್ತರಣೆಯನ್ನು ಉಪಬಂಧಿಸಲು;

(iv) ಅವಧಿ ಮುಕ್ತಾಯಗೊಳ್ಳುವ ಮೊದಲು ಅರ್ಜಿಯನ್ನು ಸಲ್ಲಿಸಿರುವ ಮತ್ತು ಪರಿಗಣನೆಗಾಗಿ ಬಾಕಿಯಿರುವ ಲೈಸನ್ಸುದಾರನಿಗೆ ಇಪ್ಪತ್ತು ವರ್ಷಗಳವರೆಗಿನ ಭಾವಿತ ವಿಸ್ತರಣೆಯನ್ನು ಉಪಬಂಧಿಸಲು;

(v) ಕಾಲಮಿತಿಯೊಳಗೆ ನವೀಕರಣ ಅರ್ಜಿಯನ್ನು ಸಲ್ಲಿಸದಿರುವ ಏಕಮಾತ್ರ ಆಧಾರದಲ್ಲಿ ತಿರಸ್ಕೃತಗೊಂಡ ಲೈಸನ್ಸಿನ ಸಂಬಂಧದಲ್ಲಿ ಇಪ್ಪತ್ತು ವರ್ಷಗಳವರೆಗೆ ಭಾವಿತ ವಿಸ್ತರಣೆಯನ್ನು ಉಪಬಂಧಿಸಲು ;

(vi) ಈ ಅಧಿನಿಯಮದ ಅಡಿಯಲ್ಲಿ ಅಪರಾಧದ ರಾಜಿಗಾಗಿ ಉಪಬಂಧಿಸಲು ; ಮತ್ತು

(vii) ಕೆಲವು ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾಗಿದ್ದರಿಂದ ಹಾಗೂ ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ ಮೇಲಿನ ಧ್ಯೇಯೋದ್ದೇಶವನ್ನು ಸಾಧಿಸುವುದಕ್ಕಾಗಿ ದಿನಾಂಕ: 31.03.2020ರಂದು ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧ್ಯಾದೇಶ, 2020ನ್ನು (2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 03) ಪ್ರಖ್ಯಾಪಿಸಲಾಯಿತು.

ಈ ವಿಧೇಯಕವು ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಆದ್ದರಿಂದ ಈ ವಿಧೇಯಕ.

[2020ರ ವಿಧಾನಸಭೆಯ ವಿಧೇಯಕ ಸಂಖ್ಯೆ:36, ಕಡತ ಸಂಖ್ಯೆ: ಸಂವ್ಯಶಾಇ 51 ಶಾಸನ 2020]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 23 ಮತ್ತು 24ನೇಯ ನಮೂದನೆಯಡಿಯಲ್ಲಿ ಬರುತ್ತದೆ]

**2012ರ ಕರ್ನಾಟಕ ಅಧಿನಿಯಮ ಸಂಖ್ಯೆ 8**

(2012ರ ಜನವರಿ ಐದನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ, 2011**

(2012ರ ಜನವರಿ ಮೂರನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

(2012ನೇ 08ರ, 2013ನೇ ಅಧಿನಿಯಮ ಸಂಖ್ಯೆ 64ರ ಮತ್ತು 2020ನೇ 28ರಲ್ಲಿ ತಿದ್ದುಪಡಿಯಾದಂತೆ)

ಕರ್ನಾಟಕ ರಾಜ್ಯದಲ್ಲಿ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಮಾನ್ಯ ಉಚ್ಚ ನ್ಯಾಯಾಲಯವು, ರಿಟ್ ಅರ್ಜಿ ಸಂಖ್ಯೆ. 17078 / 1997ರಲ್ಲಿ ದಿನಾಂಕ: 10.7.1998ರ ತನ್ನ ಆದೇಶದ ಮೂಲಕ, ಕಲ್ಲುಪುಡಿ ಮಾಡುವ ವ್ಯವಹಾರ ನಡೆಸುವುದನ್ನು ನಿಯಂತ್ರಣಗೊಳಿಸುವ ಕಾರ್ಯನೀತಿಯನ್ನು, ಮಾರ್ಗದರ್ಶಿ ಸೂತ್ರಗಳು, ಲೈಸೆನ್ಸ್‌ಗಳು ಹಾಗೂ ನವೀಕರಣಗೊಳಿಸುವುದೂ ಒಳಗೊಂಡಂತೆ ಸೂಕ್ತ ಷರತ್ತುಗಳನ್ನು ರೂಪಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿರುವುದರಿಂದ;

ಕರ್ನಾಟಕ ರಾಜ್ಯದಲ್ಲಿ, ಲೈಸೆನ್ಸ್‌ಗಳನ್ನು ನೀಡುವುದಕ್ಕೆ ಹಾಗೂ ಅವುಗಳ ನವೀಕರಣಕ್ಕೆ ಮತ್ತು ಕೆಲವು ಇತರೆ ವಿಷಯಗಳಿಗೆ ಉಪಬಂಧ ಕಲ್ಪಿಸಲು ಶಾಸನವನ್ನು ಅಧಿನಿಯಮಿಸುವುದು ಅವಶ್ಯಕವೆಂದು ಪರಿಗಣಿಸಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ,–

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕಲ್ಲುಪುಡಿ ಮಾಡುವ (ಕ್ರಷರ್‌ಗಳ) ಘಟಕಗಳ ನಿಯಂತ್ರಣ ಅಧಿನಿಯಮ, 2011 ಎಂದು ಕರೆಯತಕ್ಕದ್ದು.

(2) ಇದು, 2011ರ ಸೆಪ್ಟೆಂಬರ್ ಏಳನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. **ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,–

(ಎ) "ಅಪೀಲು ಪ್ರಾಧಿಕಾರ" ಎಂದರೆ, ಸಂಬಂಧಪಟ್ಟ ಪ್ರದೇಶದ ಪ್ರಾದೇಶಿಕ ಕಮೀಷನರ್;

(ಬಿ) [1][“ಪ್ರಾಧಿಕಾರ” ಎಂದರೆ 8ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸ್ ನೀಡಿಕೆ ಮತ್ತು ನಿಯಂತ್ರಣ ಪ್ರಾಧಿಕಾರ;][1]

(ಸಿ) "ಜಿಲ್ಲಾಧಿಕಾರಿ" ಎಂದರೆ, ಸಂಬಂಧಪಟ್ಟ ಕಂದಾಯ ಜಿಲ್ಲೆಯ ಜಿಲ್ಲಾಧಿಕಾರಿ;

(ಡಿ) "ಲೈಸೆನ್ಸು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಮಂಜೂರಾದ ಲೈಸೆನ್ಸು;

(ಇ) "ಲೈಸೆನ್ಸುದಾರ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಲೈಸೆನ್ಸನ್ನು ಹೊಂದಿರುವ ಒಬ್ಬ ವ್ಯಕ್ತಿ ಅಥವಾ ಒಂದು ಕಂಪನಿ;

(ಎಫ್) [1][“ಲೈಸೆನ್ಸಿಂಗ್ ಪ್ರಾಧಿಕಾರ” ಎಂದರೆ (ಬಿ) ಖಂಡದಲ್ಲಿ ಪರಿಭಾಷಿಸಲಾದ ಪ್ರಾಧಿಕಾರ;][1]

(ಜಿ) "ಲೈಸೆನ್ಸು ಶುಲ್ಕ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ಶುಲ್ಕ;

[1][(ಜಿ-ಎ) ``ಇತರ ರಸ್ತೆ'' ಎಂದರೆ, ಕಾಲುದಾರಿ ಅಥವಾ ಬಂಡಿದಾರಿ ಮತ್ತು ಕಲ್ಲುಪುಡಿ ಮಾಡುವ ಘಟಕಗಳ(ಕ್ರಷರ್‌ಗಳ)ನ್ನು ತಲುಪುವ ರಸ್ತೆಗಳನ್ನು ಹೊರತುಪಡಿಸಿ ಎಲ್ಲಾ ಇತರ ರಸ್ತೆ;][1]

(ಹೆಚ್) "ಮಾಲಿನ್ಯ ನಿಯಂತ್ರಣ ಮಂಡಳಿ" ಎಂದರೆ, ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974ರ ಉಪಬಂಧದ ಅಡಿಯಲ್ಲಿ ಸ್ಥಾಪಿತವಾದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ;

(ಐ) "ನಿಯಮಗಳು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳು;

(ಜೆ) "ಸುರಕ್ಷಿತ ವಲಯ" ಎಂದರೆ, ಲೈಸೆನ್ಸಿಂಗ್ ಪ್ರಾಧಿಕಾರವು 6ನೇ ಪ್ರಕರಣದಡಿಯಲ್ಲಿ ಹಾಗೆಂದು ಘೋಷಿಸಿದ ಒಂದು ಸ್ಥಳ ಅಥವಾ ಒಂದು ವಲಯ;

(ಕೆ) "ಕಲ್ಲುಪುಡಿ ಮಾಡುವ ಘಟಕ" ಎಂದರೆ, ಕಲ್ಲುಪುಡಿ ಮಾಡುವ ಯಾವುದೇ ಗಾತ್ರದ ಯಾವುದೇ ಶಕ್ತಿಚಾಲಿತ ಯಂತ್ರ;

(ಎಲ್) "ವರ್ಷ" ಎಂದರೆ ಏಪ್ರಿಲ್ ಒಂದನೇ ದಿನಾಂಕದಿಂದ ಪ್ರಾರಂಭವಾಗಿ ಮುಂದಿನ ವರ್ಷದ ಮಾರ್ಚ್ ಮೂವತ್ತೊಂದನೇ ದಿನಾಂಕಕ್ಕೆ ಮುಕ್ತಾಯವಾಗುವ ಒಂದು ವರ್ಷ.

1. 2020ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 30.03.2020ರಿಂದ ಸೇರಿಸಲಾಗಿದೆ..

(2) ಈ ಅಧಿನಿಯಮದಲ್ಲಿ ಉಪಯೋಗಿಸಿದ ಆದರೆ ಪರಿಭಾಷಿಸಿರದ ಎಲ್ಲಾ ಇತರ ಪದಗಳು ಮತ್ತು ಪದಾವಳಿಗಳು, ಗಣಿಗಳು ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957 (1957ರ ಕೇಂದ್ರ ಅಧಿನಿಯಮ 67)ರಲ್ಲಿ ಮತ್ತು ಅದರ ಅಡಿಯಲ್ಲಿ ಹೊರಡಿಸಿದ ನಿಯಮಗಳಲ್ಲಿ ಅವುಗಳಿಗೆ ಅನುಕ್ರಮವಾಗಿ ಗೊತ್ತುಪಡಿಸಿದ ಅವೇ ಅರ್ಥಗಳನ್ನು ಹೊಂದಿರತಕ್ಕದ್ದು.

1. 2013ರ ಅಧಿನಿಯಮ ಸಂಖ್ಯೆ 64ರ ಮೂಲಕ ದಿನಾಂಕ: 26.12.2013ರಿಂದ ಪ್ರತಿಯೋಜಿಸಲಾಗಿದೆ.

**3. ಕಲ್ಲುಪುಡಿ ಮಾಡುವ ಘಟಕಗಳನ್ನು ನಡೆಸುವವರು ಲೈಸೆನ್ಸನ್ನು ಪಡೆಯುವುದು.–** (1) ಈ ಅಧಿನಿಯಮದ ಅಡಿಯಲ್ಲಿ ನೀಡಿರುವ ಲೈಸೆನ್ಸಿನ ನಿಬಂಧನೆಗಳು ಮತ್ತು ಷರತ್ತುಗಳ ಅಡಿಯಲ್ಲಿ ಮತ್ತು ಅವುಗಳಿಗನುಸಾರವಾಗಿ ಹೊರತು ರಾಜ್ಯದಲ್ಲಿ ಯಾವೊಬ್ಬ ವ್ಯಕ್ತಿಯೂ ಕಲ್ಲು ಪುಡಿ ಮಾಡುವ ವ್ಯವಹಾರವನ್ನು ಕೈಗೊಳ್ಳತಕ್ಕದ್ದಲ್ಲ.

[2][(2) XXX

[1][(3) XXX ][1]

[1][(4) XXX

(5) XXX

(6) XXX

(7) XXX][1]][2]

1. 2013ರ ಅಧಿನಿಯಮ ಸಂಖ್ಯೆ 64ರ ಮೂಲಕ ದಿನಾಂಕ: 26.12.2013ರಿಂದ ಪ್ರತಿಯೋಜಿಸಲಾಗಿದೆ.
2. 2020ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 30.03.2020ರಿಂದ ಬಿಟ್ಟುಬಿಡಲಾಗಿದೆ.

**4. ಲೈಸೆನ್ಸಿಗೆ ಅರ್ಜಿ.–** (1) ಈ ಅಧಿನಿಯಮದ ಅಡಿಯಲ್ಲಿ ಕಲ್ಲು ಪುಡಿಮಾಡುವ ವ್ಯವಹಾರವನ್ನು ಕೈಗೊಳ್ಳಲು ಲೈಸನ್ಸಿನ ಮಂಜೂರಾತಿ ಅಥವಾ ನವೀಕರಣಕ್ಕಾಗಿನ ಪ್ರತಿಯೊಂದು ಅರ್ಜಿಯನ್ನು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ, ಅಂಥ ವಿಧಾನದಲ್ಲಿ, ಅಂಥ ದಸ್ತಾವೇಜುಗಳು ಮತ್ತು ಅಂಥ ಶುಲ್ಕಗಳೊಡನೆ ಲೈಸೆನ್ಸಿಂಗ್ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

ಲೈಸೆನ್ಸಿನ ನವೀಕರಣಕ್ಕಾಗಿ ಅರ್ಜಿಯನ್ನು ಲೈಸೆನ್ಸಿನ ಅವಧಿಯ ಮುಕ್ತಾಯಕ್ಕೆ ಮೂರು ತಿಂಗಳು ಮೊದಲು ಲೈಸೆನ್ಸಿಂಗ್ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

[2][ಪರಂತು, ಅರ್ಜಿದಾರನು ಲೈಸೆನ್ಸು ಮುಕ್ತಾಯವಾಗುವುದಕ್ಕೆ ಮೂರು ತಿಂಗಳಿಗೆ ಮೊದಲು ಅರ್ಜಿಯನ್ನು ಸಲ್ಲಿಸದಿದ್ದಲ್ಲಿ, ಆದರೆ ಲೈಸೆನ್ಸು ಮುಕ್ತಾಯವಾಗುವ ಒಂದು ತಿಂಗಳಿಗೆ ಮೊದಲು ಅರ್ಜಿಯನ್ನು ಸಲ್ಲಿಸಿದ್ದಲ್ಲಿ, ಜಂಟಿ ಪರಿಶೀಲನೆ ಮತ್ತು ಸುರಕ್ಷಿತ ವಲಯದ ಸೂಕ್ತತೆ ಹಾಗೂ ಇತರ ಮಾನದಂಡಗಳನ್ನು ತ್ವರಿತಗೊಳಿಸುವುದಕ್ಕಾಗಿ ನಿಯಮಿಸಬಹುದಾದ ಹೆಚ್ಚುವರಿ ಶುಲ್ಕವನ್ನು ಪಾವತಿಸುವುದಕ್ಕೆ ಒಳಪಟ್ಟು ಸಮುಚಿತ ಕಾರಣಗಳಿಗಾಗಿ ಅದನ್ನು ಒಪ್ಪಬಹುದು.][2]

[1][(2) ಲೈಸೆನ್ಸ್ ನೀಡಿಕೆಗಾಗಿ ಅಥವಾ ನವೀಕರಣಕ್ಕಾಗಿ ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಿದ ನಂತರ, ಲೈಸೆನ್ಸಿಂಗ್ ಪ್ರಾಧಿಕಾರವು, 6ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಆ ಸ್ಥಳದ ಜಂಟಿ ಪರಿಶೀಲನೆ ಮಾಡಿಸತಕ್ಕದ್ದು. ಸುರಕ್ಷಿತ ವಲಯದ ಘೋಷಣೆಯ ತರುವಾಯ ಲೈಸೆನ್ಸಿಂಗ್ ಪ್ರಾಧಿಕಾರವು, ಸುರಕ್ಷಿತ ವಲಯ ಒಪ್ಪಿಗೆ ಪ್ರಮಾಣ ಪತ್ರವನ್ನು ಅರ್ಜಿದಾರನಿಗೆ ನೀಡತಕ್ಕದ್ದು. ಲೈಸೆನ್ಸಿಂಗ್ ಪ್ರಾಧಿಕಾರವು, ಅರ್ಜಿಯಲ್ಲಿ ಪ್ರಸ್ತಾಪಿಸಿರುವ ಪ್ರದೇಶವನ್ನು ಸುರಕ್ಷಿತ ವಲಯವೆಂದು ಘೋಷಿಸಿಲ್ಲದಿದ್ದರೆ, ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಅರ್ಜಿಯನ್ನು ತಿರಸ್ಕರಿಸತಕ್ಕದ್ದು ಮತ್ತು ಅದಕ್ಕಾನುಸಾರವಾಗಿ ಅರ್ಜಿದಾರನಿಗೆ ತಿಳಿಸತಕ್ಕದ್ದು. ಆದಾಗ್ಯೂ, ಅರ್ಜಿದಾರನು ಬದಲಿ ಸ್ಥಳಕ್ಕಾಗಿ ಹೊಸ ಅರ್ಜಿಯನ್ನು ಸಲ್ಲಿಸಲು ಸ್ವತಂತ್ರನಾಗಿರತಕ್ಕದ್ದು.

(3) ಲೈಸೆನ್ಸಿಂಗ್ ಪ್ರಾಧಿಕಾರವು ಸುರಕ್ಷಿತ ವಲಯ ಒಪ್ಪಿಗೆ ಪ್ರಮಾಣ ಪತ್ರವನ್ನು ನೀಡಿದರೆ ಅರ್ಜಿದಾರನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಯನ್ನು ಸಂಪರ್ಕಿಸತಕ್ಕದ್ದು ಮತ್ತು ಕಾರ್ಯಾಚರಣೆಯ ಅನುಮತಿ ಪ್ರಮಾಣ ಪತ್ರವನ್ನು (CFO) ಪಡೆದುಕೊಳ್ಳತಕ್ಕದ್ದು ಹಾಗೂ ಅದನ್ನು ಲೈಸೆನ್ಸಿಂಗ್ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.][1]

1. 2013ರ ಅಧಿನಿಯಮ ಸಂಖ್ಯೆ 64ರ ಮೂಲಕ ದಿನಾಂಕ: 26.12.2013ರಿಂದ ಪ್ರತಿಯೋಜಿಸಲಾಗಿದೆ.

2. 2020ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 30.03.2020ರಿಂದ ಸೇರಿಸಲಾಗಿದೆ.

[1]**[4ಎ. ಕಲ್ಲುಪುಡಿ ಮಾಡುವ ಘಟಕದ (ಕ್ರಷರ್) ಲೈಸೆನ್ಸ್ ವರ್ಗಾವಣೆ:-** (1) ಕಲ್ಲುಪುಡಿ ಮಾಡುವ ಘಟಕದ (ಕ್ರಷರ್) ಲೈಸೆನ್ಸಿನ ವರ್ಗಾವಣೆಯ ಸಂದರ್ಭದಲ್ಲಿ, ಲೈಸೆನ್ಸುದಾರನು ಲೈಸೆನ್ಸಿನ ವರ್ಗಾವಣೆಗಾಗಿ ಲೈಸೆನ್ಸಿಂಗ್ ಪ್ರಾಧಿಕಾರಕ್ಕೆ ಈ ಮುಂದಿನವುಗಳೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು,-

(ಎ) ಪ್ರಕ್ರಿಯಾ ಶುಲ್ಕವಾಗಿ ಇಪ್ಪತ್ತೈದು ಸಾವಿರ ರೂಪಾಯಿಗಳ ಮರುಪಾವತಿಸದಿರುವ ಅರ್ಜಿಶುಲ್ಕ;

(ಬಿ) ವರ್ಗಾವಣೆದಾರನು ತಾನು ಲೈಸೆನ್ಸಿನ ಎಲ್ಲಾ ನಿಬಂಧನೆಗಳು, ಷರತ್ತುಗಳು ಮತ್ತು ಹೊಣೆಗಾರಿಕೆಗಳು ಅಥವಾ ಬಾಧ್ಯತೆಗಳಿಗೆ ಬದ್ಧನಾಗಿರುವನೆಂದು ಹೇಳಿಕೆಯುಳ್ಳ ಒಂದು ಶಪಥಪತ್ರ (Affidavit);

(ಸಿ) ಉದ್ದೇಶಿತ ವರ್ಗಾವಣೆದಾರನು ಇಂದಿನವರೆಗೆ ದಾಖಲಿಸಿದ ಆದಾಯ ತೆರಿಗೆ ವಿವರ ಪಟ್ಟಿಕೆಗಳು, ಆತನಿಗೆ ನಿರ್ಧರಿತವಾದ ಆದಾಯ ತೆರಿಗೆಯನ್ನು ಪಾವತಿ ಮಾಡಿದ ಹಾಗೂ ಆದಾಯ ತೆರಿಗೆ ಅಧಿನಿಯಮ, 1961ರ (1961ರ ಕೇಂದ್ರ ಅಧಿನಿಯಮ 43) ಅಡಿಯಲ್ಲಿ ಒದಗಿಸಿದ ಸ್ವಯಂ ನಿರ್ಧರಣೆಯ ಆಧಾರದ ಮೇಲೆ ಆದಾಯ ತೆರಿಗೆಯನ್ನು ಪಾವತಿಸಿದ ಹೇಳಿಕೆಯುಳ್ಳ ಒಂದು ಶಪಥಪತ್ರ (Affidavit);

(ಡಿ) ವರ್ಗಾವಣೆದಾರನು ಅಂಥ ಕಲ್ಲುಪುಡಿ ಮಾಡುವ ಘಟಕವುಳ್ಳ ಸ್ಥಳವಿರುವ ಭೂಮಿಯ ಮಾಲೀಕನ ಒಪ್ಪಿಗೆಯನ್ನು ಪಡೆದಿರುವುದಕ್ಕಾಗಿ ದಸ್ತಾವೇಜುಗಳ ಪುರಾವೆಯನ್ನು ಒದಗಿಸತಕ್ಕದ್ದು. ಭೂಮಿಯನ್ನು ಗುತ್ತಿಗೆ ಪಡೆದ ಸಂದರ್ಭದಲ್ಲಿ ಮಾಲೀಕನು ಅಂಥ ಭೂಮಿಗಾಗಿ ವಿಸ್ತರಿಸಿದ ಗುತ್ತಿಗೆ;

(ಇ) ವರ್ಗಾವಣೆಗಾಗಿ ಅರ್ಜಿ ಸಲ್ಲಿಸಿದ ದಿನಾಂಕದವರೆಗೂ ರಾಜ್ಯ ಸರ್ಕಾರಕ್ಕೆ ಸಂದಾಯವಾಗಬೇಕಾದ ಎಲ್ಲಾ ಬಾಕಿಗಳನ್ನೂ ವರ್ಗಾವಣೆದಾರ ಮತ್ತು ವರ್ಗಾಯಿಸಬೇಕಾದವನು ಪಾವತಿಸಿದ ಹೇಳಿಕೆಯುಳ್ಳ ಒಂದು ಶಪಥಪತ್ರ (Affidavit):

ಪರಂತು, ಲೈಸೆನ್ಸುದಾರನ ಸ್ವಂತ ವೆಚ್ಚಗಳಲ್ಲಿ ಲೈಸೆನ್ಸುದಾರ ಮತ್ತು ಉದ್ದೇಶಿತ ವರ್ಗಾವಣೆದಾರನೊಂದಿಗೆ ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕ/ಹಿರಿಯ ಭೂವಿಜ್ಞಾನಿಯು ಸರ್ವೇಕ್ಷಣಾ ಗಡಿಗುರುತಿಸುವಿಕೆಯನ್ನು ಮಾಡಿದ ಹೊರತು ಅಂಥ ವರ್ಗಾವಣೆಯನ್ನು ಅನುಮತಿಸತಕ್ಕದ್ದಲ್ಲ.

(2) ಅಂಥ ಲೈಸೆನ್ಸಿನ ವರ್ಗಾವಣೆಗಾಗಿ ಲೈಸೆನ್ಸಿಂಗ್ ಪ್ರಾಧಿಕಾರವು, ಸಮ್ಮತಿ ನೀಡಿದರೆ, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಕಲ್ಲುಪುಡಿಮಾಡುವ ಘಟಕದ (ಕ್ರಷರ್) ಡೀಡ್-ನ ವರ್ಗಾವಣೆಯನ್ನು, ಪತ್ರವ್ಯವಹಾರದ ದಿನಾಂಕದಿಂದ ಆರು ತಿಂಗಳುಗಳ ಒಳಗಾಗಿ ಅಥವಾ ಈ ಕುರಿತು ಲೈಸೆನ್ಸಿಂಗ್ ಪ್ರಾಧಿಕಾರವು ಅನುಮತಿಸಬಹುದಾದ ಆರು ತಿಂಗಳುಗಳನ್ನು ಮೀರದ ಅಂಥ ಮುಂದುವರಿಕೆ ಅವಧಿಯ ಒಳಗಾಗಿ ಜಾರಿ ಮಾಡತಕ್ಕದ್ದು.][1]

1. 2020ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 30.03.2020ರಿಂದ ಸೇರಿಸಲಾಗಿದೆ.

**4ಬಿ. ಲೈಸೆನ್ಸುದಾರ ಮೃತನಾದಾಗ ಕಲ್ಲುಪುಡಿ ಮಾಡುವ ಘಟಕದ (ಕ್ರಷರ್) ಲೈಸೆನ್ಸಿನ ಸ್ಥಿತಿಗತಿ.-** ಕಲ್ಲುಪುಡಿ ಮಾಡುವ ಘಟಕದ ಲೈಸೆನ್ಸು ಚಲಾವಣೆಯಲ್ಲಿರುವಾಗ ಲೈಸೆನ್ಸುದಾರನು ಮೃತನಾದರೆ ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ಆತನ ಕಾನೂನು ಸಮ್ಮತ ಪ್ರತಿನಿಧಿಯು ಲೈಸೆನ್ಸಿನ ವರ್ಗಾವಣೆಗೆ ಅರ್ಹನಾಗತಕ್ಕದ್ದು.][3]

1. 2020ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 30.03.2020ರಿಂದ ಸೇರಿಸಲಾಗಿದೆ.

**5. ಲೈಸೆನ್ಸಿನ ಕಾಲಾವಧಿ.–** [2][(1) ಒಂದು ಲೈಸೆನ್ಸು [3][[1][ಇಪ್ಪತ್ತು ವರ್ಷಗಳ]][1]][3] ಅವಧಿಯವರೆಗೆ ಸಿಂಧುವಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ಹೇಳಲಾದ ಷರತ್ತುಗಳನ್ನು ಪೂರೈಸುವುದಕ್ಕೆ ಒಳಪಟ್ಟು [3][[1][ಹತ್ತು ವರ್ಷಗಳ]][1] ಮತ್ತಷ್ಟು ಅವಧಿಗಾಗಿ][3] ನವೀಕರಿಸಬಹುದು.

**ವಿವರಣೆ:–** ಲೈಸೆನ್ಸನ್ನು ಒಂದು ವರ್ಷದ ಮಧ್ಯದಲ್ಲಿ ಮಂಜೂರು ಮಾಡಿದ್ದಲ್ಲಿ, ಲೈಸೆನ್ಸಿನ ಅವಧಿಯನ್ನು ಲೆಕ್ಕ ಮಾಡುವ ಉದ್ದೇಶಕ್ಕಾಗಿ, ವರ್ಷದ ಉಳಿದ ಭಾಗವನ್ನು ಒಂದು ವರ್ಷವೆಂದು ಭಾವಿಸತಕ್ಕದ್ದು.][2]

[4][(2) ನಿಯಮಿಸಬಹುದಾದ ಅಂಥ ವಾರ್ಷಿಕ ನಿಯಂತ್ರಣಾ ಶುಲ್ಕ ಪಾವತಿಗೆ ಒಳಪಟ್ಟು, ಕರ್ನಾಟಕ ಕಲ್ಲುಪುಡಿಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ಅಧಿನಿಯಮ, 2020ಕ್ಕಿಂತ ಮೊದಲು ಮಂಜೂರಾದ ಅಸ್ತಿತ್ವದಲ್ಲಿರುವ ಎಲ್ಲ ಕಲ್ಲುಪುಡಿಮಾಡುವ ಘಟಕಗಳ (ಕ್ರಷರ್‌ಗಳ) ಲೈಸೆನ್ಸುಗಳು ಮಂಜೂರಾದ ಮೂಲ ದಿನಾಂಕದಿಂದ ಇಪ್ಪತ್ತು ವರ್ಷಗಳ ಅವಧಿಗೆ ಮಂಜೂರು ಮಾಡಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ವಿಸ್ತರಿಸತಕ್ಕದ್ದು.

(3) ಈ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿನ ವಿಸ್ತರಣೆಯ ಪ್ರಯೋಜನವು,-

(i) ಲೈಸೆನ್ಸಿಂಗ್ ಪ್ರಾಧಿಕಾರದ ಮುಂದೆ ಪರಿಗಣನೆಗಾಗಿ ಬಾಕಿಯಿರುವ ಅಂಥ ಲೈಸನ್ಸು ಮುಕ್ತಾಯಗೊಳ್ಳುವ ಮೊದಲು ದಾಖಲಿಸಿರುವ ಕಲ್ಲುಪುಡಿಮಾಡುವ ಘಟಕದ ಲೈಸೆನ್ಸು ನವೀಕರಣ ಅರ್ಜಿಯ ಪ್ರಕರಣಗಳಿಗೆ; ಹಾಗೂ

(ii) ಅಂಥ ಲೈಸೆನ್ಸು ಮುಕ್ತಾಯಗೊಳ್ಳುವ ಮೂರು ತಿಂಗಳುಗಳ ಮೊದಲು ಅಂಥ ಅರ್ಜಿಗಳನ್ನು ಸಲ್ಲಿಸಿಲ್ಲದ ಏಕಮಾತ್ರ ಆಧಾರದ ಮೇಲೆ ನವೀಕರಣ ಅರ್ಜಿಗಳನ್ನು ಲೈಸೆನ್ಸಿಂಗ್ ಪ್ರಾಧಿಕಾರವು ತಿರಸ್ಕರಿಸಿದ್ದು, ಆದರೆ (1)ನೇ ಉಪಪ್ರಕರಣದ ಅಡಿಯಲ್ಲಿ ನಿಗದಿಪಡಿಸಿದಂತೆ (ii)ನೇ ಖಂಡದ ಅಡಿಯಲ್ಲಿ ನವೀಕರಣಕ್ಕಾಗಿ ಎರಡು ಲಕ್ಷ ರೂಪಾಯಿಗಳ

ದಂಡ ಪಾವತಿಗೆ ಒಳಪಟ್ಟು ಲೈಸೆನ್ಸು ಮುಕ್ತಾಯಗೊಳ್ಳುವ ಅವಧಿಯ ಒಳಗೆ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ ಪ್ರಕರಣಗಳಿಗೂ,

- ಸಹ ಅನ್ವಯವಾಗತಕ್ಕದ್ದು.

(4) ಈ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಕಲ್ಲುಪುಡಿಮಾಡುವ ಘಟಕದ (ಕ್ರಷರ್) ಲೈಸೆನ್ಸಿನ ಅವಧಿ ಮುಕ್ತಾಯಗೊಳ್ಳುವ ಮೇರೆಗೆ ನವೀಕರಣಕ್ಕಾಗಿ ಅರ್ಜಿಯನ್ನು ಸಲ್ಲಿಸಿದಾಗ, ಲೈಸೆನ್ಸಿಂಗ್ ಪ್ರಾಧಿಕಾರವು ಹತ್ತು ವರ್ಷಗಳ ಮತ್ತೊಂದು ಅವಧಿಯವರೆಗೆ ಲೈಸೆನ್ಸನ್ನು ವಿಸ್ತರಿಸಬಹುದು.][4]

1. 2013ರ ಅಧಿನಿಯಮ ಸಂಖ್ಯೆ 64ರ ಮೂಲಕ ದಿನಾಂಕ: 26.12.2013ರಿಂದ ಪ್ರತಿಯೋಜಿಸಲಾಗಿದೆ.
2. 2020ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 30.03.2020ರಿಂದ ಮರುಸಂಖ್ಯೆ ನೀಡಲಾಗಿದೆ.
3. 2020ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 30.03.2020ರಿಂದ ಪ್ರತಿಯೋಜಿಸಲಾಗಿದೆ.
4. 2020ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 30.03.2020ರಿಂದ ಸೇರಿಸಲಾಗಿದೆ.

[1][**6. ಸುರಕ್ಷಿತ ವಲಯವೆಂದು ಘೋಷಿಸುವುದಕ್ಕೆ ಷರತ್ತುಗಳು.–** ಈ ಅಧಿನಿಯಮದ ಅಡಿಯಲ್ಲಿ ಕಲ್ಲುಪುಡಿ ಮಾಡುವ ಘಟಕಗಳಿಗಾಗಿ ಸುರಕ್ಷಿತ ವಲಯದ ಘೋಷಣೆಯು, ಈ ಮುಂದಿನ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು, ಎಂದರೆ:–

(1) ಸುರಕ್ಷಿತ ವಲಯವು,–

"(ಎ) ರಾಷ್ಟ್ರೀಯ ಹೆದ್ದಾರಿಗಳು ಅಥವಾ ರಾಜ್ಯ ಹೆದ್ದಾರಿಗಳ ಗಡಿಯಿಂದ ಇನ್ನೂರು ಮೀಟರುಗಳೊಳಗೆ;

(ಬಿ) ಪ್ರಧಾನ ಜಿಲ್ಲಾ ರಸ್ತೆಗಳ ಗಡಿಯಿಂದ ನೂರು ಮೀಟರ್‌ಗಳೊಳಗೆ [2][ಮತ್ತು ಇತರ ರಸ್ತೆಗಳ ಗಡಿಯಿಂದ ಐವತ್ತು ಮೀಟರುಗಳೊಳಗೆ][2].

(ಸಿ) ಕಂದಾಯ ಗ್ರಾಮಗಳು, ದೇವಾಲಯಗಳು, ಶಾಲೆಗಳಿಂದ ಐದು ನೂರು ಮೀಟರುಗಳೊಳಗೆ;

(ಡಿ) ಮುನಿಸಿಪಲ್ ಕಾರ್ಪೊರೇಷನ್‌ಗಳ, ಸಿಟಿ ಮುನಿಸಿಪಲ್ ಕಾರ್ಪೊರೇಷನ್, ಟೌನ್ ಮುನಿಸಿಪಲ್ ಕೌನ್ಸಿಲ್‌ಗಳ ಸರಹದ್ದುಗಳೊಳಗೆ;

– ಇರತಕ್ಕದ್ದಲ್ಲ.

(2) ಪ್ರತಿಯೊಂದು ಕಲ್ಲುಪುಡಿ ಮಾಡುವ ಘಟಕವು ಕನಿಷ್ಠ ಒಂದು ಎಕರೆ ಭೂಮಿಯಲ್ಲಿ ಇರತಕ್ಕದ್ದು.

(3) ಲೈಸೆನ್ಸ್ ನೀಡಿಕೆ ಪ್ರಾಧಿಕಾರವು, ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯೊಳಗೆ, ಗಣಿ ಮತ್ತು ಭೂ ವಿಜ್ಞಾನ, ಕಂದಾಯ, ಅರಣ್ಯ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳಿಂದ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿಯಿಂದ ಜಂಟಿ ಪರಿಶೀಲನೆ ಮಾಡಿಸುವ ಮೂಲಕ ಮೇಲಿನ ಷರತ್ತುಗಳ ಪಾಲನೆಯ ಬಗ್ಗೆ ಪರಿಶೀಲನೆ ಮಾಡತಕ್ಕದ್ದು ಮತ್ತು ತಮ್ಮ ಅಧಿಕಾರ ವ್ಯಾಪ್ತಿಯೊಳಗೆ ಪ್ರದೇಶ ಮತ್ತು ಅದರ ವ್ಯಾಪ್ತಿಗಳನ್ನು ನಿರ್ದಿಷ್ಟಪಡಿಸಿ, ಅಧಿಸೂಚನೆಯ ಮೂಲಕ, ಸುರಕ್ಷಿತ ವಲಯವನ್ನು ಘೋಷಿಸತಕ್ಕದ್ದು:

ಪರಂತು, ಲೈಸೆನ್ಸಿಂಗ್ ಪ್ರಾಧಿಕಾರವು, ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ, ಆದರೆ ಯಾವ ಸಂದರ್ಭದಲ್ಲೂ ಮೂರು ತಿಂಗಳಿಗಿಂತ ಹೆಚ್ಚು ವಿಳಂಬವಾಗದಂತೆ ಅಸ್ತಿತ್ವದಲ್ಲಿರುವ ಕಲ್ಲುಪುಡಿ ಮಾಡುವ ಘಟಕಕ್ಕಾಗಿ ಸುರಕ್ಷಿತ ವಲಯವನ್ನು ಘೋಷಿಸತಕ್ಕದ್ದು.][1]

[3]**[ವಿವರಣೆ:** ಈ ಅಧಿನಿಯಮದ ಉದ್ದೇಶಕ್ಕಾಗಿ ಯಾವುದೇ ಜನವಸತಿ, ಶಾಲೆ, ದೇವಾಲಯಗಳು ಅಥವಾ ರಸ್ತೆಯು ಸುರಕ್ಷಿತ ವಲಯದ ಘೋಷಣೆಯ ಆನಂತರ ಬಂದರೆ, ಅಂಥ ಘೋಷಣೆಯ ಕಾರ್ಯಾಚರಣೆ ಅಥವಾ ಮುಂದುವರಿಕೆಗೆ

ಪರಿಣಮಿಸತಕ್ಕದ್ದಲ್ಲ ಮತ್ತು 5ನೇ ಪ್ರಕರಣದ ಅಡಿಯಲ್ಲಿ ಲೈಸೆನ್ಸಿನ ಯಾವುದೇ ಮಂಜೂರಾತಿ ಅಥವಾ ವಿಸ್ತರಣೆಗೆ ಪರಿಣಾಮ ಬೀರತಕ್ಕದ್ದಲ್ಲ.][3]

1. 2013ರ ಅಧಿನಿಯಮ ಸಂಖ್ಯೆ 64ರ ಮೂಲಕ ದಿನಾಂಕ: 26.12.2013ರಿಂದ ಪ್ರತಿಯೋಜಿಸಲಾಗಿದೆ.
2. 2020ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 30.03.2020ರಿಂದ ಪ್ರತಿಯೋಜಿಸಲಾಗಿದೆ.
3. 2020ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 30.03.2020ರಿಂದ ಸೇರಿಸಲಾಗಿದೆ.

[1][**6ಎ. ಲೈಸೆನ್ಸನ್ನು ನೀಡುವುದಕ್ಕಾಗಿ ಷರತ್ತುಗಳು.**– (1) ಸುರಕ್ಷಿತ ವಲಯದಿಂದಾಚೆಗೆ ಕಲ್ಲುಪುಡಿ ಮಾಡುವ ಘಟಕಗಳಿಗೆ ಯಾವುದೇ ಲೈಸೆನ್ಸನ್ನು ನೀಡತಕ್ಕದ್ದಲ್ಲ.

(2) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನೀಡಿರುವ ಕಾರ್ಯಾಚರಣೆಯ ಅನುಮತಿ ಪ್ರಮಾಣಪತ್ರವನ್ನು (Consent for Operation Certificate - CFO) ಹಾಜರುಪಡಿಸಿದ ಮೇಲೆ, ಲೈಸೆನ್ಸಿಂಗ್ ಪ್ರಾಧಿಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಅರ್ಜಿದಾರನಿಗೆ ಲೈಸೆನ್ಸನ್ನು ನೀಡತಕ್ಕದ್ದು. ಲೈಸೆನ್ಸುದಾರನು ಈ ಮುಂದಿನ ಷರತ್ತುಗಳಿಗೆ ಬದ್ಧನಾಗಿರತಕ್ಕದ್ದು, ಎಂದರೆ:–

(1) ಪ್ರತಿಯೊಂದು ಘಟಕವು, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯು ಕಾಲಕಾಲಕ್ಕೆ ನಿಗದಿಪಡಿಸಬಹುದಾದಂತೆ ವಾಯು (ಮಾಲಿನ್ಯ ಪ್ರತಿಬಂಧ ಮತ್ತು ನಿಯಂತ್ರಣ) ಅಧಿನಿಯಮ, 1981 ಮತ್ತು ಪರಿಸರ ಸಂರಕ್ಷಣೆ ಅಧಿನಿಯಮ, 1986 ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳಿಗೆ ಬದ್ಧವಾಗಿರತಕ್ಕದ್ದು;

(2) ಪ್ರತಿಯೊಂದು ಘಟಕವು ಶಬ್ದ (ವಿನಿಯಮಗಳು ಮತ್ತು ನಿಯಂತ್ರಣ) ನಿಯಮಗಳು, 2000 ಇದಕ್ಕೆ ಅನುಸಾರವಾಗಿರತಕ್ಕದ್ದು;

[2][**(2ಎ)** ಪ್ರತಿಯೊಬ್ಬ ಲೈಸೆನ್ಸುದಾರನು, ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) (ತಿದ್ದುಪಡಿ) ಅಧಿನಿಯಮ, 2020 ಜಾರಿಗೆ ಬಂದ ದಿನಾಂಕದಿಂದ ನಿಯಮಿಸಬಹುದಾದ ಅಂಥ ವಾರ್ಷಿಕ ನಿಯಂತ್ರಣಾ ಶುಲ್ಕವನ್ನು ಪಾವತಿಸತಕ್ಕದ್ದು.][2]

(3) ಕಲ್ಲುಪುಡಿ ಮಾಡುವ ಒಂದು ಘಟಕವು (ಕ್ರಷರ್) ಅಥವಾ ಘಟಕಗಳ ಸಮೂಹವು ವಾಯು ಮಾಲಿನ್ಯ ನಿಯಂತ್ರಣ ಕ್ರಮಗಳ ಜೊತೆಗೆ, (ಸಂದರ್ಭಾನುಸಾರ, ರಾಷ್ಟ್ರೀಯ ಹೆದ್ದಾರಿ ಅಥವಾ ರಾಜ್ಯ ಹೆದ್ದಾರಿ ಅಥವಾ ಪ್ರಧಾನ ಜಿಲ್ಲಾ ರಸ್ತೆ ಅಥವಾ ಗ್ರಾಮ ವಸತಿ ಪ್ರದೇಶ ಅಥವಾ ದೇವಾಲಯ ಅಥವಾ ಶಾಲೆಗೆ ಸಮಾನಾಂತರವಾಗಿ) ಎಲ್ಲಾ ಮೂರು ಕಡೆಗಳಲ್ಲಿ 15 ರಿಂದ 20 ಅಡಿ ಎತ್ತರದ ಗೋಡೆ/ ಜಿಐ ಶೀಟ್ ರಕ್ಷಣೆ ಒದಗಿಸತಕ್ಕದ್ದು.

(4) ಅರ್ಜಿದಾರನು,–

(ಎ) ಆ ಸ್ಥಳದಿಂದ ಧೂಳು ಹೊರಕ್ಕೆ ಹೋಗದಂತೆ ತಡೆಗಟ್ಟಲು ದೊಡ್ಡ ಪ್ರಮಾಣದಲ್ಲಿ ಧೂಳು ಹೊರ ಹಾಕುವ ಮೂಲಗಳಿಗೆ ಕಟ್ಟಡ ಆವರಣಗಳನ್ನು ನಿರ್ಮಿಸುವಂಥ ಅವಶ್ಯವಾದ ಧೂಳು ತಡೆ ವ್ಯವಸ್ಥೆಯನ್ನು ಅಳವಡಿಸಿಕೊಳ್ಳತಕ್ಕದ್ದು;

(ಬಿ) ಬಿರುಸಾಗಿ ಬೀಸುವ ಗಾಳಿಯನ್ನು ತಡೆದುಕೊಳ್ಳುವಂಥ ಆಂಗಲ್ ಸ್ಟ್ರಕ್ಚರ್‌ಗಳ ಆಸರೆಯ ಹಂದರವಿರುವ ಜಿ.ಐ.ಶೀಟುಗಳ (1.66ಮಿಮೀ ಮತ್ತು 1.25ಮಿ.ಮೀ ದಪ್ಪದ) ಜಿ.ಐ.ಶೀಟ್‌ಗಳ ಆವರಣ ಬೇಲಿಯನ್ನು (enclosures)ನಿರ್ಮಿಸತಕ್ಕದ್ದು;

(ಸಿ) ನೀರು ಸಂಗ್ರಹವಾಗುವುದನ್ನು ತಡೆಗಟ್ಟುವ ಹಾಗೆ ಇಳಿಜಾರು ಛಾವಣಿ ಅನುಕ್ರಮವಾಗಿ ನಿರ್ಮಿಸತಕ್ಕದ್ದು;

(ಡಿ) ಪರಿಸರಕ್ಕೆ ಧೂಳು ಬಿಡುಗಡೆಯಾಗುವುದನ್ನು ತಡೆಗಟ್ಟಲು ಪೂರ್ತಿಯಾಗಿ ಮುಚ್ಚುವಂಥ ಹಾಪರ್ ಬಾಟಂ/ಉತ್ಪನ್ನವನ್ನು ಇಳಿಸುವ ಕನ್ವೇಯರ್‌ನಂಥ ಸಾಮಗ್ರಿ ವರ್ಗಾವಣೆ ತಾಣವನ್ನು ವ್ಯವಸ್ಥೆಗೊಳಿಸತಕ್ಕದ್ದು;

(ಇ) ಜಾ ಕ್ರಷರುಗಳ ಪಕ್ಕದಲ್ಲಿ ಮತ್ತು ತಳಭಾಗದಲ್ಲಿ ತೆರೆದಿರುವ ಭಾಗಗಳಲ್ಲಿ ಪೂರ್ಣವಾಗಿ ಮುಚ್ಚುವಂಥ ಆವರಣ ಬೇಲಿ ನಿರ್ಮಿಸಲು ಸಾಧ್ಯವಿಲ್ಲದಿದ್ದಲ್ಲಿ, ಪರಿಸರಕ್ಕೆ ಧೂಳು ಬಿಡುಗಡೆಯಾಗುವುದನ್ನು ತಡೆಗಟ್ಟಲು ಅವುಗಳಿಗೆ ಜಿಐ ಷೀಟ್‌ಗಳು/ರಬ್ಬರ್ ಫ್ಲಾಪ್ ಅಥವಾ ಯಾವುದೇ ಇತರ ಸಾಮಗ್ರಿಯಿಂದ ಸೂಕ್ತವಾಗಿ ಮುಚ್ಚುವ ವ್ಯವಸ್ಥೆ ಮಾಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು;

(ಎಫ್) ಎತ್ತರದಿಂದ ವಸ್ತುಗಳು ಅಡೆತಡೆಯಿಲ್ಲದೆ ಬೀಳುವಾಗ ಪರಿಸರದೊಳಗೆ ಧೂಳು ಬಿಡುಗಡೆಯಾಗುವುದನ್ನು ತಡೆಗಟ್ಟಲು ಉತ್ಪನ್ನವನ್ನು ಇಳಿಸುವ ಕನ್ವೇಯರ್‌ಗಳಲ್ಲಿ ಟೆಲಿಸ್ಕೋಪಿಕ್ ಚ್ಯೂಟ್‌ಗಳನ್ನು ಅಳವಡಿಸಲಾಗಿದೆಯೆಂದು ಖಚಿತಪಡಿಸಿಕೊಳ್ಳತಕ್ಕದ್ದು. ರಾಶಿಯ ಗಾತ್ರಕ್ಕೆ ಅನುಗುಣವಾಗಿ ಈ ಚ್ಯೂಟ್‌ಗಳನ್ನು ಉದ್ದದಲ್ಲಿ ಸರಿಹೊಂದಿಸಿಕೊಳ್ಳಬಹುದು;

(ಜಿ) ಧೂಳಿನ ಬಿಡುಗಡೆಯನ್ನು ತಡೆಗಟ್ಟಲು, ರಬ್ಬರ್ ಫ್ಲಾಪ್‌ನೊಂದಿಗೆ (ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ) ಶಾಫ್ಟರ್ ಮೋಟಾರು ಡ್ರೈವರ್ ಕನ್ವೆಯರ್ ಬೆಲ್ಟ್‌ಗಳ ಮೇಲೆ, ಮುಂತಾದ ಕಡೆಗಳಲ್ಲಿ ಆವರಣ ಬೇಲಿಯಲ್ಲಿ ತೆರೆದ ಕಿಂಡಿಗಳನ್ನು ಏರ್ಪಡಿಸತಕ್ಕದ್ದು;

(ಎಚ್) ಧೂಳಿನ ಮೋಡವನ್ನು ನಿವಾರಿಸಲು, ಧೂಳು ಉತ್ಪಾದನೆಯಾಗುವ ಮೂಲಗಳ ಮೇಲೆ, ವಿಶೇಷ ನಳಿಕೆಗಳ ಮೂಲಕ ಸಣ್ಣದಾಗಿ ನೀರಿನ ತುಂತುರು ಹನಿಗಳನ್ನು ಸಿಂಪಡಿಸುವುದನ್ನು ಒಳಗೊಂಡಂತೆ ಪರಿಣಾಮಕಾರಿ ಧೂಳು ನಿವಾರಣಾ ವ್ಯವಸ್ಥೆಯನ್ನು ಕಲ್ಪಿಸತಕ್ಕದ್ದು;

(ಐ) ನೀರು ಸಿಂಪರಣೆ ನಳಿಕೆಯ ಕಟ್ಟಿಕೊಳ್ಳುವುದನ್ನು ತಡೆಗಟ್ಟಲು ಅದನ್ನು ಕಾಲಕಾಲಕ್ಕೆ ಶುಚಿಗೊಳಿಸತಕ್ಕದ್ದು;

(ಜೆ) ವೃತ್ತಿ ಸುರಕ್ಷತಾ ಕ್ರಮವಾಗಿ, ಎಲ್ಲಾ ಕೆಲಸಗಾರರಿಗೆ ಮೂಗು ಮುಚ್ಚಿಕೊಳ್ಳುವಂಥ ಮುಸುಕನ್ನು ಒದಗಿಸತಕ್ಕದ್ದು.

(5) ಧೂಳಿನ ಕಣಗಳು ಹರಡುವುದನ್ನು ತಡೆಗಟ್ಟಲು ಬೇವು, ಹುಣಸೆ, ಗೋಲ್ಡ್ ಮೊಹರ್, ಮುತ್ತುಗದ ಮರ, ಮುಂತಾದ ಯಾವುದೇ ಇತರ ಸ್ಥಳೀಯ ತಳಿಯ ದಟ್ಟವಾದ ಎಲೆಗಳುಳ್ಳ ನಿತ್ಯಹರಿದ್ವರ್ಣ ಮರಗಳನ್ನು ಒಳಗೊಂಡ ಸಮರ್ಪಕ ಹಸಿರು ವಲಯವನ್ನು ಎಲ್ಲಾ ಕಲ್ಲುಪುಡಿ ಮಾಡುವ ಘಟಕಗಳು (ಕ್ರಷರ್‌ಗಳು) ಬೆಳೆಸತಕ್ಕದ್ದು.][1]

1. 2013ರ ಅಧಿನಿಯಮ ಸಂಖ್ಯೆ 64ರ ಮೂಲಕ ದಿನಾಂಕ: 26.12.2013ರಿಂದ ಪ್ರತಿಯೋಜಿಸಲಾಗಿದೆ.

2. 2020ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 30.03.2020ರಿಂದ ಸೇರಿಸಲಾಗಿದೆ.

**7. ಸರ್ಕಾರಿ ಯೋಜನೆಗಳಿಗಾಗಿ ಕಲ್ಲುಪುಡಿ ಮಾಡುವ ಘಟಕಗಳಿಗೆ ಲೈಸೆನ್ಸ್.–** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ರಾಷ್ಟ್ರೀಯ ಹೆದ್ದಾರಿಗಳ, ರಾಜ್ಯ ಹೆದ್ದಾರಿಗಳ ನಿರ್ಮಾಣಕ್ಕಾಗಿ ಅಥವಾ ಯಾವುದೇ ಇತರ ಮೂಲ ಸೌಕರ್ಯಕ್ಕಾಗಿರುವ ಸರ್ಕಾರಿ ಯೋಜನೆಗಳಿಗಾಗಿ, ಮತ್ತು ಅನುಮೋದಿತವಾದ ಸಾರ್ವಜನಿಕ – ಖಾಸಗಿ ಪಾಲುದಾರಿಕೆ ಯೋಜನೆಗಾಗಿಯೇ ಅನನ್ಯವಾಗಿ ತಾತ್ಕಾಲಿಕ ಕಲ್ಲುಪುಡಿ ಮಾಡುವ ಘಟಕಕ್ಕೆ ಲೈಸೆನ್ಸ್‌ನ್ನು, ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 ಮತ್ತು ಪರಿಸರ ಸಂರಕ್ಷಣೆ ಅಧಿನಿಯಮ, 1986 ಮತ್ತು ಅವುಗಳ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳನ್ನು ಪೂರೈಸಿದ ಮೇಲೆ, ಅಂಥ ಯೋಜನಾ ಅವಧಿಗಾಗಿ, ಮಂಜೂರು ಮಾಡಬಹುದು.

[1][**8. ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸ್ ನೀಡಿಕೆ ಮತ್ತು ನಿಯಂತ್ರಣ ಪ್ರಾಧಿಕಾರದ ಸ್ಥಾಪನೆ.–** (1) ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) (ತಿದ್ದುಪಡಿ) ಅಧಿನಿಯಮ, 2013ರ ಪ್ರಾರಂಭದ ದಿನಾಂಕದಂದು ಮತ್ತು ಅಂದಿನಿಂದ, ಪ್ರತಿಯೊಂದು ಕಂದಾಯ ಜಿಲ್ಲೆಯಲ್ಲಿ, ಈ ಮುಂದಿನ ಸದಸ್ಯರನ್ನು ಒಳಗೊಂಡಿರುವ ಒಂದು ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸನ್ಸ್ ನೀಡಿಕೆ ಮತ್ತು ನಿಯಂತ್ರಣ ಪ್ರಾಧಿಕಾರವನ್ನು ಸ್ಥಾಪಿಸತಕ್ಕದ್ದು, ಎಂದರೆ:–

| | | |
|---|---|---|
| (ಎ) | ಜಿಲ್ಲೆಯ ಜಿಲ್ಲಾಧಿಕಾರಿ . . . . | ಅಧ್ಯಕ್ಷರು |
| (ಬಿ) | ಜಿಲ್ಲೆಯ ಪೋಲೀಸ್ ಸೂಪರಿಂಟೆಂಡೆಂಟ್ . . . . | ಪದನಿಮಿತ್ತ ಸದಸ್ಯರು |
| (ಸಿ) | ಜಿಲ್ಲೆಯ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ . . . . | ಪದನಿಮಿತ್ತ ಸದಸ್ಯರು |
| (ಡಿ) | ಸಂಬಂಧಪಟ್ಟ ಅಧಿಕಾರ ವ್ಯಾಪ್ತಿ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ . . . . | ಪದನಿಮಿತ್ತ ಸದಸ್ಯರು |
| (ಇ) | ಜಿಲ್ಲೆಯ ಎಲ್ಲಾ ಉಪ ವಿಭಾಗಾಧಿಕಾರಿಗಳು, ಕಂದಾಯ ಇಲಾಖೆ . . . . | ಪದನಿಮಿತ್ತ ಸದಸ್ಯರು |
| (ಎಫ್) | ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ . . . . | ಪದನಿಮಿತ್ತ ಸದಸ್ಯರು |
| (ಜಿ) | ಉಪ ನಿರ್ದೇಶಕರು/ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ . .. | ಸದಸ್ಯ–ಕಾರ್ಯದರ್ಶಿ |

(2) ಲೈಸೆನ್ಸಿನ ಮಂಜೂರಾತಿಗಾಗಿ ಸಲ್ಲಿಸುವ ಎಲ್ಲಾ ಅರ್ಜಿಗಳನ್ನು ಸದಸ್ಯ ಕಾರ್ಯದರ್ಶಿಯು ಸ್ವೀಕರಿಸತಕ್ಕದ್ದು ಮತ್ತು ತೀರ್ಮಾನಕ್ಕಾಗಿ ಅದನ್ನು ಪ್ರಾಧಿಕಾರದ ಮುಂದೆ ಇಡತಕ್ಕದ್ದು.

(3) ಪ್ರಾಧಿಕಾರದ ಕಾರ್ಯಕಲಾಪ ನಿರ್ವಹಣೆಯ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.][1]

1. 2013ರ ಅಧಿನಿಯಮ ಸಂಖ್ಯೆ 64ರ ಮೂಲಕ ದಿನಾಂಕ: 26.12.2013ರಿಂದ ಪ್ರತಿಯೋಜಿಸಲಾಗಿದೆ.

[1][9. **ಪ್ರಾಧಿಕಾರದ ಕರ್ತವ್ಯಗಳು.–** (1) ಪ್ರಾಧಿಕಾರವು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು ಮತ್ತು ಸದಸ್ಯ ಕಾರ್ಯದರ್ಶಿಯು ಸಭೆಯನ್ನು ಕರೆಯತಕ್ಕದ್ದು. ಯಾವುದೇ ಕಾರಣಕ್ಕಾಗಿ ಅವಶ್ಯವಿದ್ದರೆ, ಸದಸ್ಯ ಕಾರ್ಯದರ್ಶಿಯು, ಅಧ್ಯಕ್ಷರ ಅನುಮೋದನೆ ಪಡೆದು ಯಾವುದೇ ಸಮಯದಲ್ಲಿ ಸಭೆಯನ್ನು ಕರೆಯಬಹುದು. ಒಟ್ಟು ಸದಸ್ಯರ ಮೂರನೇ ಒಂದರಷ್ಟು ಸದಸ್ಯರು ಸಭೆಯ ಕೋರಂ ಆಗಿರತಕ್ಕದ್ದು.

(2) ಈ ಮುಂದಿನವು ಪ್ರಾಧಿಕಾರದ ಕರ್ತವ್ಯಗಳಾಗಿರತಕ್ಕದ್ದು,–

(i) ಸುರಕ್ಷಿತ ವಲಯವನ್ನು ಘೋಷಿಸುವುದಕ್ಕಾಗಿ ಗೊತ್ತುಪಡಿಸಿದ ಷರತ್ತುಗಳ ಪಾಲನೆ ಬಗ್ಗೆ ಪರಿಶೀಲನೆ ಮಾಡಲು ಗಣಿ ಮತ್ತು ಭೂವಿಜ್ಞಾನ, ಕಂದಾಯ, ಅರಣ್ಯ ಇಲಾಖೆಗಳು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಂಬಂಧಪಟ್ಟ ಅಧಿಕಾರಿಗಳಿಂದ ಕಲ್ಲುಪುಡಿ ಮಾಡುವ ಘಟಕಗಳ ಜಂಟಿ ತಪಾಸಣೆ ಮಾಡಿಸುವುದು ಮತ್ತು ವರದಿಯನ್ನು ಪಡೆಯುವುದು;

(ii) ಗುಣಮಟ್ಟಗಳಿಗೆ ಅನುಸಾರವಾಗಿರುವಂಥವುಗಳನ್ನು ಸುರಕ್ಷಿತ ವಲಯವೆಂದು ಘೋಷಿಸುವುದು;

(iii) ಘೋಷಿತ ಸುರಕ್ಷಿತ ವಲಯದಲ್ಲಿ ಕಲ್ಲುಪುಡಿ ಮಾಡುವ ಘಟಕಗಳನ್ನು ಹೊಂದಿರುವ ಅರ್ಜಿದಾರರಿಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಸುರಕ್ಷಿತ ವಲಯ ಪಾಲನಾ ಪ್ರಮಾಣಪತ್ರವನ್ನು ನೀಡುವುದು;

(iv) ನಿಯಮಿಸಬಹುದಾದಂಥ ನಮೂನೆಯಲ್ಲಿ ಲೈಸೆನ್ಸನ್ನು ನೀಡುವುದು;

(v) ಲೈಸೆನ್ಸ್ ಇರುವ ಆವರಣಗಳನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಯಾವುದೇ ಉಲ್ಲಂಘನೆಯ ಬಗ್ಗೆ ಅಧ್ಯಕ್ಷರಿಗೆ ವರದಿ ಮಾಡುವುದು;

(vi) ಷರತ್ತುಗಳನ್ನು ಪಾಲಿಸದಿರುವುದಕ್ಕಾಗಿ ಲೈಸೆನ್ಸನ್ನು ಅಮಾನತುಗೊಳಿಸುವುದು/ ರದ್ದುಗೊಳಿಸುವುದು;

(vii) ನಷ್ಟ ಪರಿಹಾರವನ್ನು ಲೆಕ್ಕ ಹಾಕುವುದು, ತಾಂತ್ರಿಕ ಸಲಹೆಯನ್ನು ನೀಡುವುದು ಮುಂತಾದ ಯಾವುದೇ ನಿರ್ದಿಷ್ಟ ವಿಷಯಗಳ ಬಗ್ಗೆ ಪ್ರಾಧಿಕಾರಕ್ಕೆ ನೆರವು ನೀಡಲು ಸರ್ಕಾರದ ಯಾವುದೇ ಇತರ ಇಲಾಖೆಗಳ ಯಾರೇ ಅಧಿಕಾರಿಗಳನ್ನು ಆಹ್ವಾನಿಸುವುದು;

(viii) ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳು ಮತ್ತು ಮಾರ್ಗಸೂಚಿಗಳನ್ನು ಅನುಸರಿಸುವುದು;

(ix) ಕನಿಷ್ಠ ಪಕ್ಷ ವರ್ಷಕ್ಕೊಮ್ಮೆಯಾದರೂ ನಿಯತಕಾಲಿಕವಾಗಿ ಪ್ರತಿಯೊಂದು ಕಲ್ಲುಪುಡಿ ಮಾಡುವ ಘಟಕವನ್ನು ತಪಾಸಣೆ ಮಾಡುವುದು ಅಥವಾ ತಪಾಸಣೆ ಮಾಡಲು ಒಬ್ಬ ಅಧಿಕಾರಿಯನ್ನು ಅಧಿಕೃತಗೊಳಿಸುವುದು.][1]

1. 2013ರ ಅಧಿನಿಯಮ ಸಂಖ್ಯೆ 64ರ ಮೂಲಕ ದಿನಾಂಕ: 26.12.2013ರಿಂದ ಪ್ರತಿಯೋಜಿಸಲಾಗಿದೆ.

**10. ಲೈಸೆನ್ಸಿನ ರದ್ಧತಿ.–** ಈ ಅಧಿನಿಯಮದ ಅಡಿಯಲ್ಲಿ ನೀಡಿದ ಲೈಸೆನ್ಸನ್ನು, ಲೈಸೆನ್ಸಿಂಗ್ ಪ್ರಾಧಿಕಾರವು ಲಿಖಿತದಲ್ಲಿ ದಾಖಲು ಮಾಡಿದ ಕಾರಣಗಳಿಗಾಗಿ, ತಾನಾಗಿಯೇ ಆಗಲೀ ಅಥವಾ ಈ ಅಧಿನಿಯಮದ ಮತ್ತು ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿಲ್ಲವೆಂದು ಅಥವಾ ಲೈಸೆನ್ಸುದಾರನು ಲೈಸೆನ್ಸಿನ ಷರತ್ತುಗಳನ್ನು ಉಲ್ಲಂಘಿಸಿದ್ದಾನೆಂಬ ಬಗ್ಗೆ ಯಾವೊಬ್ಬ ವ್ಯಕ್ತಿಯು ಸಲ್ಲಿಸಿದ ದೂರನ್ನು ಅಥವಾ ಅರ್ಜಿಯನ್ನು ಪರಿಗಣಿಸಿದ ತರುವಾಯವಾಗಲೀ ರದ್ದುಪಡಿಸಬಹುದು:

ಪರಂತು, ಅಂಥ ರದ್ಧತಿಯಿಂದ ಬಾಧಿತನಾದ ಲೈಸೆನ್ಸುದಾರನಿಗೆ ಅಥವಾ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡದ ಹೊರತು, ಈ ಪ್ರಕರಣದ ಅಡಿಯಲ್ಲಿ ಲೈಸೆನ್ಸನ್ನು ರದ್ದುಪಡಿಸುವ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**11. ನಿರ್ದೇಶನಗಳನ್ನು ನೀಡಲು ಅಧಿಕಾರ.–** ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಈ ಸಂಬಂಧದಲ್ಲಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ನೀಡಬಹುದಾದ ಯಾವುದೇ ನಿರ್ದೇಶನಗಳಿಗೆ ಒಳಪಟ್ಟು ಲೈಸನ್ಸಿಂಗ್ ಪ್ರಾಧಿಕಾರವು, ಈ ಅಧಿನಿಯಮದಡಿಯಲ್ಲಿ ತನ್ನ ಅಧಿಕಾರಗಳನ್ನು ಚಲಾಯಿಸಿ ಮತ್ತು ತನ್ನ ಪ್ರಕಾರ್ಯಗಳನ್ನು ನಿರ್ವಹಿಸಿ, ಯಾವೊಬ್ಬ ವ್ಯಕ್ತಿ, ಅಧಿಕಾರಿ ಅಥವಾ ಪ್ರಾಧಿಕಾರಕ್ಕೆ ಲಿಖಿತದಲ್ಲಿ ಯಾವುದೇ ನಿರ್ದೇಶನಗಳನ್ನು ನೀಡಬಹುದು ಮತ್ತು ಅಂಥ ವ್ಯಕ್ತಿ, ಅಧಿಕಾರಿ ಅಥವಾ ಪ್ರಾಧಿಕಾರವು ಅಂಥ ನಿರ್ದೇಶನಗಳ ಪಾಲನೆಗೆ ಬದ್ಧವಾಗಿರತಕ್ಕದ್ದು.

**ವಿವರಣೆ.–** ಈ ಪ್ರಕರಣದಡಿಯಲ್ಲಿನ ನಿರ್ದೇಶನಗಳನ್ನು ನೀಡುವ ಅಧಿಕಾರವು,

(ಎ) ಯಾವುದೇ ಕಲ್ಲುಪುಡಿ ಮಾಡುವ ಘಟಕದ ಸಮಾಪನ, ನಿಷೇಧ ಅಥವಾ ನಿಯಂತ್ರಣ; ಅಥವಾ

(ಬಿ) ಕಲ್ಲು ಪುಡಿ ಮಾಡುವ ಘಟಕಕ್ಕೆ ವಿದ್ಯುಚ್ಛಕ್ತಿ, ನೀರು ಪೂರೈಕೆ ಅಥವಾ ಯಾವುದೇ ಇತರ ಸೇವೆಯನ್ನು ಸ್ಥಗಿತಗೊಳಿಸುವುದು ಅಥವಾ ನಿಯಂತ್ರಿಸುವುದು,

–ಇವುಗಳಿಗೆ ಸಂಬಂಧಿಸಿದಂತೆ ನಿರ್ದೇಶನಗಳನ್ನು ನೀಡುವ ಅಧಿಕಾರವನ್ನೂ ಒಳಗೊಂಡಿರತಕ್ಕದ್ದು.

[1][**12. ಬಾಧಿತರಿಗೆ ನೀಡಲಾಗುವ ಪರಿಹಾರ ನಿಧಿ.–** (1) ಪ್ರಾಧಿಕಾರವು, ಬಾಧಿತರಿಗೆ ನೀಡಲಾಗುವ ಪರಿಹಾರ ನಿಧಿ ಎಂದು ಕರೆಯಲಾಗುವ ಒಂದು ಪ್ರತ್ಯೇಕ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು ಮತ್ತು ವಿಧಿಸಿದ ಅರ್ಜಿ ಶುಲ್ಕ, ಲೈಸೆನ್ಸ್ ಶುಲ್ಕಗಳು, ಜುಲ್ಮಾನೆಗಳು ಮತ್ತು ದಂಡಗಳ ಮುಖಾಂತರ ತಾನು ಸ್ವೀಕರಿಸಿದ ಎಲ್ಲಾ ಹಣವನ್ನು ಅದಕ್ಕೆ ಜಮೆ ಮಾಡತಕ್ಕದ್ದು. ಅದನ್ನು, ನಿಯಮಿಸಬಹುದಾದ ನಿಯಮಗಳಿಗನುಸಾರವಾಗಿ ವಿನಿಯೋಗಿಸತಕ್ಕದ್ದು ಮತ್ತು ವಿತರಿಸತಕ್ಕದ್ದು.

(2) ಪ್ರಾಧಿಕಾರದ ಅಧ್ಯಕ್ಷ ಮತ್ತು ಸದಸ್ಯ ಕಾರ್ಯದರ್ಶಿಯು, ನಿಯಮಿಸಬಹುದಾದ ಕಾರ್ಯವಿಧಾನಕ್ಕೆ ಅನುಸಾರವಾಗಿ ಬಾಧಿತರಿಗೆ ನೀಡಲಾಗುವ ಪರಿಹಾರ ನಿಧಿಯನ್ನು, ಜಂಟಿಯಾಗಿ ನಿರ್ವಹಿಸತಕ್ಕದ್ದು.

(3) ಬಾಧಿತರಿಗೆ ನೀಡಲಾಗುವ ಪರಿಹಾರ ನಿಧಿಯನ್ನು, ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ನಿಯಮಿಸಬಹುದಾದ ರೀತಿಯಲ್ಲಿ ಇಡತಕ್ಕದ್ದು.

(4) ಪ್ರಾಧಿಕಾರವು, ಕಲ್ಲು ಪುಡಿ ಮಾಡುವ ಘಟಕಗಳಿಂದ ಆರೋಗ್ಯದ ತೊಂದರೆಗಳು ಉಂಟಾದ ಕಾರಣದ ಮೇಲೆ, ಆರೋಗ್ಯದ ತೊಂದರೆ ಉಂಟಾದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಬಾಧಿತರಾದವರಿಂದ ದೂರುಗಳು ಅಥವಾ ಅರ್ಜಿಗಳು ಅಥವಾ ಕ್ಲೇಮನ್ನು ಸ್ವೀಕರಿಸತಕ್ಕದ್ದು ಮತ್ತು ಅಂಥ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯೊಳಗೆ ಬಾಧಿತರಿಗೆ ಅಥವಾ ಅವರ ಕಾನೂನುಬದ್ಧ ಪ್ರತಿನಿಧಿಗಳಿಗೆ ನೀಡಬೇಕಾದ ಪರಿಹಾರವನ್ನು ಅಥವಾ ನಷ್ಟ ಪರಿಹಾರದ ಮೊತ್ತವನ್ನು ನಿರ್ಧರಿಸತಕ್ಕದ್ದು. ಪ್ರಾಧಿಕಾರವು, ಪರಿಹಾರ ಅಥವಾ ನಷ್ಟ ಪರಿಹಾರದ ಮೊಬಲಗನ್ನು ನಿರ್ಧರಿಸುವಾಗ, ಕಲ್ಲುಪುಡಿ ಮಾಡುವ ಘಟಕದ ನೋಂದಾಯಿತ ಸಂಘದ ಒಬ್ಬ ಪ್ರತಿನಿಧಿಯನ್ನು ಮತ್ತು ಕಲ್ಲುಪುಡಿ ಮಾಡುವ ಘಟಕಗಳ ಕಾರ್ಮಿಕರ ಒಬ್ಬ ಪ್ರತಿನಿಧಿಯನ್ನು ಆಹ್ವಾನಿಸತಕ್ಕದ್ದು. ದೂರು ಅಥವಾ ಅರ್ಜಿಯನ್ನು ಅಥವಾ ಯುಕ್ತ ಮತ್ತು ಸಾಕಷ್ಟು ಕಾರಣಗಳಿಗಾಗಿ ಕ್ಲೇಮನ್ನು ಸಲ್ಲಿಸುವಲ್ಲಿ ಆಗಿರುವ ವಿಳಂಬವನ್ನು ಮಾಫಿ ಮಾಡಲು ಪ್ರಾಧಿಕಾರವು ಸ್ವತಂತ್ರವಾಗಿರುತ್ತದೆ.

(5) ಪ್ರಾಧಿಕಾರವು, ತಾನು ಸಂದಾಯ ಮಾಡಿದ ಮೊತ್ತದ ಜೊತೆಯಲ್ಲಿ, (4)ನೇ ಉಪಪ್ರಕರಣದಡಿಯಲ್ಲಿ ನಿರ್ಧರಿಸಿದಂಥ ಮೊತ್ತವನ್ನು ತನ್ನ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಅಂಥ ಬಾಧಿತರಿಗೆ ಸಂದಾಯ ಮಾಡುವಂತೆ ಲೈಸೆನ್ಸುದಾರನಿಗೆ ಕೂಡಾ ನಿರ್ದೇಶಿಸಬಹುದು. ಅದಕ್ಕೆ ತಪ್ಪಿದಲ್ಲಿ, ಆದೇಶದಲ್ಲಿ ನಿರ್ದಿಷ್ಟಪಡಿಸಲಾದ ಮೊತ್ತವನ್ನು, ಭೂ ಕಂದಾಯದ ಬಾಕಿಯಂತೆ ವಸೂಲು ಮಾಡತಕ್ಕದ್ದು ಮತ್ತು ಲೈಸನ್ಸನ್ನು ರದ್ದುಪಡಿಸತಕ್ಕದ್ದು:

ಪರಂತು, ಹಾಗೆ ಹೊರಡಿಸಿದ ಆದೇಶವನ್ನು ಕೂಡಲೇ, ಸಂಬಂಧಪಟ್ಟ ಎಲ್ಲಾ ಪಕ್ಷಕಾರರಿಗೆ ತಿಳಿಸತಕ್ಕದ್ದು.][1]

1. 2013ರ ಅಧಿನಿಯಮ ಸಂಖ್ಯೆ 64ರ ಮೂಲಕ ದಿನಾಂಕ: 26.12.2013ರಿಂದ ಪ್ರತಿಯೋಜಿಸಲಾಗಿದೆ.

**13. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.–** (1) ಬಾಧಿತರಿಗಾಗಿ ಪರಿಹಾರ ನಿಧಿಯ ಎಲ್ಲಾ ಸ್ವೀಕೃತಿಗಳು ಮತ್ತು ವೆಚ್ಚಗಳ ಲೆಕ್ಕಪತ್ರಗಳನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ನಮೂನೆಯಲ್ಲಿ ಇಡತಕ್ಕದ್ದು.

(2) ಬಾಧಿತರಿಗಾಗಿ ಪರಿಹಾರ ನಿಧಿಯ ಲೆಕ್ಕಪತ್ರಗಳು ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ವಾರ್ಷಿಕ ಲೆಕ್ಕಪರಿಶೋಧನೆಗೆ ಒಳಪಟ್ಟಿರತಕ್ಕದ್ದು ಮತ್ತು ವಾರ್ಷಿಕವಾಗಿ ಲೆಕ್ಕಪರಿಶೋಧನಾ ವರದಿಯನ್ನು ರಾಜ್ಯಸರ್ಕಾರಕ್ಕೆ ಕಳುಹಿಸತಕ್ಕದ್ದು.

[1][**14. ವಾರ್ಷಿಕ ವರದಿ.–** ಪ್ರಾಧಿಕಾರವು ಪ್ರತಿಯೊಂದು ಸಭೆಯ ಕಾರ್ಯಕಲಾಪಗಳನ್ನು ದಾಖಲಿಸತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ ಅದರ ಕಾರ್ಯ ಚಟುವಟಿಕೆಗಳ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಪ್ರತಿ ಆರ್ಥಿಕ ವರ್ಷದ ಅಂತ್ಯದ ಮೂರು ತಿಂಗಳುಗಳೊಳಗೆ ನಿಯಮಗಳಲ್ಲಿ ಗೊತ್ತುಪಡಿಸಿರುವಂಥ ರೀತಿಯಲ್ಲಿ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.][1]

1. 2013ರ ಅಧಿನಿಯಮ ಸಂಖ್ಯೆ 64ರ ಮೂಲಕ ದಿನಾಂಕ: 26.12.2013ರಿಂದ ಪ್ರತಿಯೋಜಿಸಲಾಗಿದೆ.

**15. ಲೈಸೆನ್ಸಿಂಗ್ ಪ್ರಾಧಿಕಾರದ ಆದೇಶಗಳ ವಿರುದ್ಧ ಅಪೀಲುಗಳು.–** (1) ಸಂಬಂಧಪಟ್ಟ ಪ್ರದೇಶದ ಪ್ರಾದೇಶಿಕ ಕಮೀಷನರನು, ತನಗೆ ಸಂಬಂಧಿಸಿದ ಅಧಿಕಾರ ವ್ಯಾಪ್ತಿಯೊಳಗೆ ಲೈಸೆನ್ಸಿಂಗ್ ಪ್ರಾಧಿಕಾರವು ಹೊರಡಿಸಿದ ಆದೇಶಗಳ ಅಪೀಲುಗಳ ಸಂಬಂಧದಲ್ಲಿ, ಅಪೀಲು ಪ್ರಾಧಿಕಾರಿಯಾಗಿರತಕ್ಕದ್ದು.

(2) ಬಾಧಿತ ವ್ಯಕ್ತಿಗೆ ಕಳುಹಿಸಿದ ಅಪೀಲಿನ ವಿರುದ್ಧದ ಆದೇಶದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಪ್ರತಿಯೊಂದು ಅಪೀಲನ್ನು ಸಲ್ಲಿಸತಕ್ಕದ್ದು:

ಪರಂತು, ಅಪೀಲನ್ನು ಆ ಅವಧಿಯಲ್ಲಿ ಹಾಜರುಪಡಿಸದಿರಲು ಅಪೀಲುದಾರನು ಸಾಕಷ್ಟು ಕಾರಣವನ್ನು ತೋರಿಸಿದಲ್ಲಿ, ಅಪೀಲನ್ನು ಸದರಿ ಮೂವತ್ತು ದಿನಗಳ ಅವಧಿಯ ತರುವಾಯವೂ ಒಪ್ಪಿಕೊಳ್ಳಬಹುದು.

(3) ಪ್ರತಿಯೊಂದು ಅಪೀಲು, ಆದೇಶಕ್ಕೆ ಆಕ್ಷೇಪಣೆಯ ಆಧಾರಗಳನ್ನು ಸಂಕ್ಷಿಪ್ತವಾಗಿ ಹೇಳುವ ಜ್ಞಾಪನಾಪತ್ರದ ನಮೂನೆಯಲ್ಲಿ ಇರತಕ್ಕದ್ದು ಮತ್ತು ಅದರೊಂದಿಗೆ ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಆದೇಶದ ಪ್ರತಿಯು ಇರತಕ್ಕದ್ದು.

(4) ಅಪೀಲನ್ನು, ಎರಡೂ ಕಡೆಯ ಅಹವಾಲನ್ನು ಕೇಳಿದ ಮೇಲೆ ಮೂರು ತಿಂಗಳುಗಳ ಅವಧಿಯೊಳಗೆ ವಿಲೆ ಮಾಡತಕ್ಕದ್ದು.

**16. ದಂಡಗಳು.-** [1][ (1) (3)ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬನು ಅಪರಾಧ ನಿರ್ಣೀತನಾದ ಮೇಲೆ ಎರಡು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರವಾಸದಿಂದ ಅಥವಾ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಅಥವಾ ಎರಡರಿಂದಲೂ ಹಾಗೂ ಉಲ್ಲಂಘನೆಯನ್ನು ಮುಂದುವರೆಸಿದ ಸಂದರ್ಭದಲ್ಲಿ, ಅಂಥ ಮೊದಲ ಉಲ್ಲಂಘನೆಯ ತರುವಾಯ ಮುಂದುವರಿದ ಅಂಥ ಉಲ್ಲಂಘನೆಗೆ ಪ್ರತಿಯೊಂದು ದಿವಸಕ್ಕಾಗಿ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

(1ಎ) ಲೈಸೆನ್ಸುದಾರನು ಲೈಸೆನ್ಸಿನ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಅಪರಾಧ ನಿರ್ಣೀತನಾದ ಮೇಲೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರವಾಸದಿಂದ ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಳ ಜುಲ್ಮಾನೆಯೊಂದಿಗೆ ಅಥವಾ ಎರಡರಿಂದಲೂ ಹಾಗೂ ಉಲ್ಲಂಘನೆಯನ್ನು ಮುಂದುವರೆಸಿದ ಸಂದರ್ಭದಲ್ಲಿ, ಅಂಥ ಮೊದಲ ಉಲ್ಲಂಘನೆಯ ತರುವಾಯ ಮುಂದುವರಿದ ಅಂಥ ಉಲ್ಲಂಘನೆಗೆ ಪ್ರತಿಯೊಂದು ದಿವಸಕ್ಕಾಗಿ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.][1]

(2) ಈ ಅಧಿನಿಯಮದ ಯಾವುದೇ ಉಪಬಂಧದ ಅಡಿಯಲ್ಲಿ ಮಾಡಲಾದ ಯಾವುದೇ ನಿಯಮವು, ಅದರ ಯಾವುದೇ ಉಲ್ಲಂಘನೆಗಾಗಿ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ, ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಆ ಉಲ್ಲಂಘನೆಯು ಮುಂದುವರೆಯುತ್ತಿರುವ ಸಂದರ್ಭದಲ್ಲಿ, ಮೊದಲನೆಯ ಅಂಥ ಉಲ್ಲಂಘನೆಗಾಗಿ, ಅಪರಾಧ ನಿರ್ಣಯವಾದ ತರುವಾಯ, ಅಂಥ ಉಲ್ಲಂಘನೆಯು ಮುಂದುವರೆದ ಪ್ರತಿಯೊಂದು ದಿನಕ್ಕೆ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದೆಂದು ಉಪಬಂಧಿಸಬಹುದು.

1. 2020ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 30.03.2020ರಿಂದ ಪ್ರತಿಯೋಜಿಸಲಾಗಿದೆ.

**17. ಅಪರಾಧಗಳ ಸಂಜ್ಞೇಯತೆ.–** (1) [1][ರಾಜ್ಯ ಸರ್ಕಾರವು][1] ಈ ಬಗ್ಗೆ ಅಧಿಕೃತಗೊಳಿಸಿದ ವ್ಯಕ್ತಿಯು ಲಿಖಿತದಲ್ಲಿ ಮಾಡಿಕೊಂಡ ದೂರಿನ ಮೇಲಲ್ಲದೆ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾದ ಯಾವುದೇ ನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

(2) ಮೊದಲನೇ ದರ್ಜೆ ನ್ಯಾಯಿಕ ದಂಡನಾಧಿಕಾರಿ ನ್ಯಾಯಾಲಯವನ್ನು ಹೊರತುಪಡಿಸಿ ಇತರ ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧದ ವಿಚಾರಣೆ ಮಾಡತಕ್ಕದ್ದಲ್ಲ.

1. 2020ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 30.03.2020ರಿಂದ ಪ್ರತಿಯೋಜಿಸಲಾಗಿದೆ.

[1]**[17ಎ. ಅಪರಾಧಗಳ ರಾಜಿ.-** (1) 16ನೇ ಪ್ರಕರಣದ (1ಎ) ಉಪಪ್ರಕರಣದ ಅಡಿಯಲ್ಲಿನ ಯಾವುದೇ ದಂಡನೀಯ ಅಪರಾಧಕ್ಕೆ ಅಭಿಯೋಜನೆಯನ್ನು ನಡೆಸುವ ಮೊದಲು ಅಥವಾ ನಡೆಸಿದ ತರುವಾಯ, 16ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು ಸರ್ಕಾರಕ್ಕೆ ಜಮೆಗೊಳಿಸಿ ಪಾವತಿಸಿದ ಮೇಲೆ ಸಂಬಂಧಿತ ಜಿಲ್ಲೆಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಸೇರಿದ ಉಪನಿರ್ದೇಶಕ ಅಥವಾ ಹಿರಿಯ ಭೂ ವಿಜ್ಞಾನಿ ಅಥವಾ ಸರ್ಕಾರವು ಗೊತ್ತುಪಡಿಸಿದ ಅಧಿಕಾರಿಯ ಮೂಲಕ ರಾಜಿ ಮಾಡಿಕೊಳ್ಳಬಹುದು.

(2) ಈ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಅಪರಾಧವನ್ನು ರಾಜಿ ಮಾಡಿಕೊಂಡರೆ ಹಾಗೆ ರಾಜಿ ಮಾಡಿಕೊಂಡ ಅಪರಾಧದ ಸಂದರ್ಭದಲ್ಲಿ ಅಪರಾಧಿಯ ವಿರುದ್ಧ ಯಾವುದೇ ವ್ಯವಹರಣೆಗಳನ್ನು ಅಥವಾ ಸಂದರ್ಭಾನುಸಾರವಾಗಿ ಮುಂದುವರೆದ ವ್ಯವಹರಣೆಗಳನ್ನು ನಡೆಸತಕ್ಕದ್ದಲ್ಲ, ಹಾಗೂ ಅಪರಾಧಿಯು ಅಭಿರಕ್ಷೆಯಲ್ಲಿದ್ದರೆ ಕೂಡಲೇ ಬಿಡುಗಡೆಗೊಳಿಸತಕ್ಕದ್ದು.][1]

1. 2020ರ ಅಧಿನಿಯಮ ಸಂಖ್ಯೆ 28ರ ಮೂಲಕ ದಿನಾಂಕ: 30.03.2020ರಿಂದ ಸೇರಿಸಲಾಗಿದೆ.

**18. ನಿಯಮಗಳ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು, ಪೂರ್ವ ಪ್ರಕಟಣೆಯ ತರುವಾಯ, ಅಧಿಸೂಚನೆಯ ಮೂಲಕ, ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಒಂದು ಅಧಿವೇಶನ ಅಥವಾ ಎರಡು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಅಧಿವೇಶನದಲ್ಲಿರುವಾಗ, ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ರಚಿಸಬಾರದೆಂದು ಉಭಯ ಸದನಗಳು ಒಪ್ಪಿದರೆ, ಆ ತರುವಾಯ ಅಂಥ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ

ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

**19. ತೊಂದರೆಗಳ ನಿವಾರಣೆ.–** ಈ ಅಧಿನಿಯಮದ ಉಪಬಂಧವನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಸಂದರ್ಭವು ಅಗತ್ಯಪಡಿಸಬಹುದಾದಂತೆ ತೊಂದರೆಯನ್ನು ನಿವಾರಿಸಲು ಅವಶ್ಯವೆಂದು ಕಂಡುಬರುವ ಯಾವುದೇ ಕಾರ್ಯವನ್ನು ಮಾಡಬಹುದು.

**20. ನಿರಸನ ಮತ್ತು ಉಳಿಸುವಿಕೆಗಳು.–** (1) ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧ್ಯಾದೇಶ, 2011ನ್ನು (2011ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 2) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದಾಗ್ಯೂ, ಸದರಿ ಅಧ್ಯಾದೇಶದ ಮೂಲಕ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಜಿ.ಕೆ.ಬೋರೇಗೌಡ**

ಸರ್ಕಾರದ ಕಾರ್ಯದರ್ಶಿ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ

## 2020 ರ ಕರ್ನಾಟಕ ಅಧಿನಿಯಮ ಸಂಖ್ಯೆ: 28

(2020 ರ ಅಕ್ಟೋಬರ್ ತಿಂಗಳ 19 ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ಅಧಿನಿಯಮ, 2020

(2020 ರ ಅಕ್ಟೋಬರ್ ತಿಂಗಳ 16ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ, 2011 ಅನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ, 2011ನ್ನು (2012ರ ಕರ್ನಾಟಕ ಅಧಿನಿಯಮ 8) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1.ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು 2020ರ ಮಾರ್ಚ್ 30ನೇ ದಿನದಿಂದ ಜಾರಿಗೆ ಬರತಕ್ಕದ್ದು.

**ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧ್ಯಾದೇಶ, 2020ನ್ನು (2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 03) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ ಕ್ರಮವನ್ನು ಕೈಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ತಿದ್ದುಪಡಿಯಾದಂತೆ ಅದನ್ನು ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

**ವಜುಭಾಯಿ ವಾಲ**
**ಕರ್ನಾಟಕ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ